

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SK NEWS ಕನ್ನಡ

SIHI KAHI
KANNADA DAILY MORNING
BAGALKOT

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

Volume : 06 | Issue : 250 | Wednesday 12-06-2024 | E-mail : maruti.b.hosamani76@gmail.com | Page: 4 | Price : Rs. 1/-


## ಕಲೆ, ಸಂಸ್ಕೃತಿ ಉಳಿಸಿ, ಬೆಳೆಸಿ ಕಾವ್ಯ ಶ್ರೀ ಚಾರಿಟೇಬಲ್ ಟ್ರಸ್ಟ್ (ರಿ) ಕಾರ್ಯಾಧ್ಯಕ್ಷ ಡಾ. ಶಿವಣ್ಣ ಜಿ.



**ಬೆಂಗಳೂರು :** ಕಲೆ ಮತ್ತು ಸಂಸ್ಕೃತಿಯನ್ನು ಉಳಿಸಿ, ಬೆಳೆಸುವಂತಹ ಕೆಲಸ ನಾವೆಲ್ಲರೂ ಮಾಡಬೇಕಾಗಿದೆ, ಜೊತೆಗೆ ಅನೇಕ ಪೌರಾಣಿಕ ಸಾಮಾಜಿಕ ನಾಟಕಗಳಿಗೆ ಅಭಿನಯ ಮಾಡುವುದು ಈಗಿನ ಯುವಶಕ್ತಿಗೆ ಪ್ರೇರಣೆ ನೀಡಬೇಕಾಗಿದೆ. ಕನ್ನಡ ನಾಡು ನುಡಿ ಜಲ ಭಾಷೆ ವಿಷಯದಲ್ಲಿ ನಾವೆಲ್ಲರೂ ಕನ್ನಡಕ್ಕಾಗಿ ಕಂಕಣ ಬದ್ಧರಾಗಿ ನಿಲ್ಲಬೇಕು. ಎಂದು ಕಾವ್ಯಶ್ರೀ ಚಾರಿಟೇಬಲ್ ಟ್ರಸ್ಟ್ ಕಾರ್ಯಾಧ್ಯಕ್ಷರಾದ ಡಾ. ಜಿ. ಶಿವಣ್ಣ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತಿನ ಅಕ್ಕಮಹಾದೇವಿ ಸಭಾಂಗಣದಲ್ಲಿ ಕಾವ್ಯಶ್ರೀ ಚಾರಿಟೇಬಲ್ ಟ್ರಸ್ಟ್ (ರಿ) ಕರ್ನಾಟಕ ವತಿಯಿಂದ ಆಯೋಜಿಸಿದ ಕನ್ನಡ ಸಾಹಿತ್ಯ ಸಂಭ್ರಮ ಕಾರ್ಯಕ್ರಮದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಅನುದಾನಿತ ಹಾಗೂ ಅನುದಾನ ಪಡೆದಂತ ಕವಿಯತ್ರಿ ಆಶಾ ಶಿವು "" ಮಲೆನಾಡಿನ ಸಿರಿ ಸೊಬಗಿನ ವಯ್ಯಾರಿ " ಪುಸ್ತಕವನ್ನು ಇತಿಹಾಸ ತಜ್ಞರು ಹಾಗೂ ಸಂಶೋಧಕರಾದಂತಹ ಡಾ. ತಲಕಾಡು ಚಿಕ್ಕ ರಂಗೇಗೌಡ ರವರು. ಜನಪದ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ವೈ ಬಿ ಹೆಚ್ ಜಯದೇವ್. ಡಾ ಚಿಕ್ಕ ಹೆಜ್ಜಾಜಿ ಮಹದೇವ್, ದಿವ್ಯ ಸಾನಿಧ್ಯ ಡಾ. ಆರೂಢ ಭಾರತಿ ಮಹಾಸ್ವಾಮಿಗಳ ಅಮೃತ ಹಸ್ತದಿಂದ ಲೋಕಾರ್ಪಣೆ ಗೊಂಡಿತು. ಕಾರ್ಯಕ್ರಮವನ್ನು ಡಾ. ಚಿಕ್ಕ ಹೆಜ್ಜಾಜಿ ಮಹದೇವ್ ಉದ್ಘಾಟಿಸಿದರು ನಂತರ ಮಾತನಾಡಿ ಕಥೆ, ಕವನ, ಕಾದಂಬರಿ, ಪುಸ್ತಕಗಳನ್ನು ಓದುವ ಹವ್ಯಾಸ ರೂಡಿಸಿ ಕೊಳ್ಳಬೇಕು. ಜೊತೆಗೆ ಬಸವಾದಿ ಪ್ರಮಥರ ಹಾಗೂ ನಾಡಿನೆಲ್ಲ ದಾರ್ಶನಿಕರ ಪುಸ್ತಕಗಳನ್ನುಓದುವುದರಜೊತೆಗೆಇಂದಿನ ಯುವ ಪೀಳಿಗೆಗೆ ಪರಿಚಯಿಸುವ ಕೆಲಸ ನಾವೆಲ್ಲರೂ ಮಾಡಬೇಕಾಗಿದೆ. ಶರಣ ಶರಣೆಯರ ವಚನಗಳನ್ನು ತಿಳಿದು, ತಮ್ಮ ಜೀವನದಲ್ಲಿ ಅಳವಡಿಸಿ ಕೊಳ್ಳಬೇಕು ಎಂದರು.

ಕೃತಿ ಅನಾವರಣ ಮತ್ತು ಪರಿಚಯ ಡಾ. ತಲಕಾಡು ಚಿಕ್ಕ ರಂಗೇಗೌಡ ಮಾತನಾಡಿ ಮಲೆನಾಡಿನ ಸಿರಿ ಸೊಬಗಿನ ವಯ್ಯಾರಿ ಎಂಬ ಕೃತಿಯು ಅಪೂರ್ವ ಪ್ರವಾಸಿ ತಾಣಗಳಅನನ್ಯಪರಿಚಯಮತ್ತುಪೌರಾಣಿಕ ಇತಿಹಾಸವನ್ನು ಒಳಗೊಂಡಿದೆ ಕೃತಿಯ ಕುರಿತು ಸ್ವ ವಿವರವಾಗಿ ತಿಳಿಸಿದರು.

ಅಖಿಲ ಕರ್ನಾಟಕ ವಿಷ್ಣುವರ್ಧನ್ ಅಭಿಮಾನಿ ಸಂಘ ರಾಜ್ಯಾಧ್ಯಕ್ಷರಾದ ವೀರಕಪುತ್ರ ಶ್ರೀನಿವಾಸ್ ಮಾತನಾಡಿ ಕರ್ನಾಟಕದಲ್ಲಿ ವರ್ಷದಲ್ಲಿ ಅನೇಕ ಕೃತಿಗಳು ಬಿಡುಗಡೆ ಯಾಗುತ್ತಿವೆ, ಆದರೆ ಕನ್ನಡ ಪುಸ್ತಕವನ್ನು ಓದುವ ಹವ್ಯಾಸ, ಜೊತೆಗೆ ಪುಸ್ತಕವನ್ನು ಹಂಚುವುದನ್ನು ಮತ್ತು ಗ್ರಂಥಾಲಯಗಳಿಗೆ ನೀಡುವುದರಿಂದ ಜ್ಞಾನಾರ್ಜನೆ ಉಂಟಾಗುತ್ತದೆ. ಎಂದು ತಿಳಿಸಿದರು.

ಡಾ. ಚಂದ್ರಶೇಖರ್ ಮಾಡಲಗೇರಿ ಚೇತನ ಫೌಂಡೇಶನ್ ಕರ್ನಾಟಕ ಇವರು ಮಾತನಾಡಿದರು.

ಇದೇ ಕಾರ್ಯಕ್ರಮದಲ್ಲಿ ಡಾ. ಆರೂಢ ಭಾರತಿ ಮಹಾಸ್ವಾಮಿಗಳು ಸಿದ್ಧಾರೂಢ ಮಿಷನ್ ರಾಮಹಳ್ಳಿ, ಡಿ.ಕೆ.ರವಿ ಅಭಿಮಾನಿ ಬಳಗದ ರಾಜ್ಯಾಧ್ಯಕ್ಷರು ಮುರುಳಿ ಗೌಡ, ಡಾ. ರೇವಣ್ಣ, ಅಧ್ಯಕ್ಷರು ಅಕ್ಷರ ಚಪ್ಪರ ಸಂಸ್ಥೆ ಮಧು ಅಕ್ಷರಿ. ಎಂಎಸ್ ಆಶಾಲತಾ, ಕವಯತ್ರಿ ಲತಾ ಭಾರ್ಗವ್, ಪುಷ್ಪವತಿ ಕೆ.ಬಿ, ಮಾಲಪ್ರಸಾದ್, ಅಕ್ಷರನಾದ ವೇದಿಕೆ ಅಧ್ಯಕ್ಷರು ಶ್ರುತಿ ಮಧುಸೂದನ್, ರೈತ ಹೋರಾಟಗಾರರಾದ ಎಂ, ಬಸವರಾಜ್, ನಿರಂಜನ್ ಕುಮಾರ್ ಎ, ವೀರೇಶ್ ಕೆ.ಎಸ್. ಸಂಗಮನಾಥ್ ಪಿ ಸಜ್ಜನ್, ಡಾ. ನವೀನ್ ಬಿ ಸಜ್ಜನ್,

ಜಾನಪದ ನೃತ್ಯ, ಕಾವ್ಯವಾಚನ, ಉಪನ್ಯಾಸ, ಹಾಗೂ ಪ್ರಶಸ್ತಿ ಪ್ರಧಾನ ಕಾರ್ಯಕ್ರಮದಲ್ಲಿ ರಾಷ್ಟ್ರೀಯ ಬಸವ ಶ್ರೀ ಪ್ರಶಸ್ತಿ, ಕಾಯಕ ಶ್ರೀ ಪ್ರಶಸ್ತಿ, ಸರ್ ಎಂ ವಿಶ್ವೇಶ್ವರಯ್ಯ ಪ್ರಶಸ್ತಿ, ನಾಡಪ್ರಭು ಕೆಂಪೇಗೌಡ ಪ್ರಶಸ್ತಿ, ಕರ್ನಾಟಕ ಕಲಾ ರತ್ನ ಪ್ರಶಸ್ತಿ, ಡಾ. ಬಿ ಆರ್ ಅಂಬೇಡ್ಕರ್ ಸದ್ಭಾವನಾ ಪ್ರಶಸ್ತಿ, ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಸಾಧಕರಿಗೆ ಪ್ರಶಸ್ತಿ ಪ್ರಧಾನ ಮಾಡಿ ಗೌರವಿಸಲಾಯಿತು.

ಇದೇ ಸಂದರ್ಭದಲ್ಲಿ ವಿವಿಧ ಕ್ಷೇತ್ರದ ಸಾಧನೆಗೈದ ಸಾಧಕರು. ಹಾಗೂ ಚೇತನ ಫೌಂಡೇಶನ್ ಧಾರವಾಡ, ಅಕ್ಷರ ಚಪ್ಪರ ಸಂಸ್ಥೆ ಬೆಂಗಳೂರು, ಸುವರ್ಣ ಕರ್ನಾಟಕ ಪತ್ರಕರ್ತರ ಸಂಘ ಬೆಂಗಳೂರು, ಚಿತ್ರೋದ್ಯಮ ಪತ್ರಿಕೆ, ಸಂಚಲನ ನ್ಯೂಸ್ ಮತ್ತು ಡಾ ಜಿ ಶಿವಣ್ಣ ಅಭಿಮಾನಿ ಬಳಗ ಅನೇಕ ಕವಿಗಳು ಕವಿಯತ್ರಿಯರು ಸಾಹಿತಿಗಳು ಸಂಶೋಧಕರು ಸೇರಿದಂತೆ ಇತರರು ಸಾರ್ವಜನಿಕರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಕೆ.ಎಸ್.ವೀರೇಶ್ ಕಾನಾ ಹೊಸಹಳ್ಳಿ**

## ಧ್ವನಿ ಮುದ್ರಣಕ್ಕೆ ಹೊರಟ "ಸುಮಾ" ಚಲನ ಚಿತ್ರ



**ಬೆಂಗಳೂರು :** ಓಂ ಸಾಯಿ ಸಿನಿಮಾಸ್' ಬ್ಯಾನರಿನಲ್ಲಿ ನಿರ್ಮಾಣ ವಾಗುತ್ತಿರುವ ಮಹಿಳಾ ಪ್ರಧಾನ ಕಥಾ ಹಂದರ ಹೊಂದಿರುವ 'ಸುಮಾ' ಸಿನಿಮಾದ ಚಿತ್ರೀಕರಣ ಸಂಪೂರ್ಣ ಮುಕ್ತಾಯ ಗೊಂಡು ಧ್ವನಿಮುದ್ರಣ ಕಾರ್ಯದಲ್ಲಿ ತೊಡಗಿದೆ.

'ಸುಮಾ' ಚಿತ್ರದ ಚಿತ್ರೀಕರಣ ಮಂಡ್ಯ ಜಿಲ್ಲೆಯ ಕೆ ಎಂ ದೊಡ್ಡಿ (ಭಾರತೀನಗರ), ಆಲಭುಜನಹಳ್ಳಿ, ನಗರಕೆರೆ ಮತ್ತು ಮಾಲಗಾರನಹಳ್ಳಿಯ ಸುತ್ತಮುತ್ತ ಒಟ್ಟು 20 ದಿನಗಳ ಕಾಲ ಚಿತ್ರೀಕರಣ ಮಾಡಿದ್ದು ಹಾಡುಗಳ ಚಿತ್ರೀಕರಣಕ್ಕಾಗಿ ಚಿತ್ರ ತಂಡ ಊಟಿಗೆ ತೆರಳಿತ್ತು. ಈ ಹಿಂದೆ ಕನ್ನಡದಲ್ಲಿ 'ಶ್ರೀಕಬ್ಬಾಳಮ್ಮನ ಮಹಿಮೆ', 'ಮನೆ', 'ಬ್ಯಾಂಕ್ ಲೋನ್', 'ಸುಳಿ' ಸೇರಿದಂತೆ ನಾಲ್ಕು ಸಿನಿಮಾಗಳನ್ನು ನಿರ್ದೇಶಿಸಿ ಸೈ ಎನಿಸಿ ಕೊಂಡಿರುವ ರಶ್ಮಿ ಎಸ್. 'ಸುಮಾ' ಸಿನಿಮಾಕ್ಕೆ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ನಿರ್ದೇಶನ ಮಾಡಿದ್ದು ಮೈಸೂರು ಮೂಲದ ಪ್ರದೀಪ್ ಗೌಡ ನಾಯಕನಾಗಿ, ನಾಯಕಿಯಾಗಿ ಮೊದಲ ಬಾರಿಗೆ ಮಾನ್ಯತಾ ನಾಯ್ಡು, ಉಳಿದಂತೆ ಬಾಲ ರಾಜವಾಡಿ, ಜೋ ಸೈಮನ್, ಮುರಳೀಧರ್ ಡಿ. ಆರ್, ಕಾವ್ಯ ಪ್ರಕಾಶ್, ಪವಿತ್ರ, ವಿಜಯಲಕ್ಷ್ಮೀ,ಅವಿನಾಶಗಂಜಿಹಾಳ,ಶಿವಕುಮಾರ್ ಆರಾಧ್ಯ , ಹರಿಹರನ್ ಬಿ. ಪಿ, ಉಧೋ ಉಧೋ ಶ್ರೀ ರೇಣುಕಾ ಯಲ್ಲಮ್ಮ ಧಾರಾವಾಹಿ ಖ್ಯಾತಿಯ ಭೈರವಿ, ಮಂಜುಳಾ ಅತಿಥಿ ಪಾತ್ರದಲ್ಲಿ ಡಾ ವಿ ನಾಗೇಂದ್ರ ಪ್ರಸಾದ್ , ವೈದ್ಯೆಯಾದ ಡಾ ಶ್ವೇತ (ಗೈನಾಕಲಜಿಸ್ಟ್) ಅಭಿನಯಿಸಿದ್ದಾರೆ.

'ಸುಮಾ' ಸಿನಿಮಾಕ್ಕೆ ದೇವೂ, ವಿನಾಯಕ್ ರೇವಡಿ ಬಾಗಲಕೋಟೆ, ಮತ್ತು ಗಗನ್ ಆರ್ ಇವರ ಛಾಯಾಗ್ರಹಣ, ಮುತ್ತುರಾಜ್ ಟಿ. ಸಂಕಲನವಿದೆ. ಸಿನಿಮಾದ ಹಾಡುಗಳಿಗೆ ವೇದಾಂತ್ ಅತಿಶಯ್ ಜೈನ್ ಸಂಗೀತವಿದ್ದು, ಸತೀಶ್ ಜೋಶಿ ಹಾವೇರಿ ಮತ್ತು ಪ್ರದೀಪ್ ಗೌಡ ರವರ ಸಾಹಿತ್ಯವಿದೆ. ಮೇಘನ ಹಳಿಯಾಳ ಮತ್ತಿತರರು ಹಾಡುಗಳಿಗೆ ಧ್ವನಿನೀಡಿದ್ದು, ಪತ್ರಿಕಾಸಂಪರ್ಕ ಕಾರ್ತಿಕ್ ಸುಧನ್, ಡಾ.ಪ್ರಭು ಗಂಜಿಹಾಳ,ಡಾ.ವೀರೇಶ ಹಂಡಿಗಿ ಅವರದಿದೆ.ಸಿನಿಮಾಕ್ಕೆ ರಂಗಸ್ವಾಮಿ ಟಿ (ರವಿ) ಸಹ ನಿರ್ಮಾಪಕರಾಗಿದ್ದಾರೆ. ಚಿತ್ರತಂಡದ ಯೋಜನೆಯಂತೆ, ಇದೇ ಆಗಸ್ಟ್ ವೇಳೆಗೆ 'ಸುಮಾ' ಸಿನಿಮಾದ ಪೋಸ್ಟ್ ಪ್ರೊಡಕ್ಷನ್ಸ್ ಕೆಲಸಗಳನ್ನು ಪೂರ್ಣಗೊಳಿಸಿ, ಅಕ್ಟೋಬರ್ ನಲ್ಲಿ ಪ್ರೇಕ್ಷಕರ ಮುಂದೆ ತರುವ ಯೋಚನೆಯಲ್ಲಿದೆ ಚಿತ್ರ ತಂಡ.

**ವರದಿ : ಡಾ. ಪ್ರಭು ಗಂಜಿಹಾಳ**
**ಮೊ:9448775346**

## ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆ



**ರಬಕವಿ-ಬನಹಟ್ಟಿ :** ಇಂದಿನ ದಿನಮಾನಗಳಲ್ಲಿ ಪರಿಸರ ಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಿದೆ. ನಾಳಿನ ಭವಿಷ್ಯಕ್ಕೆ ಉತ್ತಮವಾದ ಪರಿಸರ ನೀಡುವಲ್ಲಿ ಪ್ರತಿಯೊಬ್ಬರು ತಪ್ಪದೇ ಗಿಡಗಳನ್ನು ನೆಡಬೇಕು ಎಂದು ರಬಕವಿ-ಬನಹಟ್ಟಿ ನಗರಸಭೆ ಪೌರಾಯುಕ್ತ ಜಗದೀಶ ಈಟಿ ಹೇಳಿದರು.

ಅವರು ಬುಧವಾರ ರಬಕವಿ-ಬನಹಟ್ಟಿ ನಗರಸಭೆ ವತಿಯಿಂದ ಬನಹಟ್ಟಿ ನಗರಸಭೆ ಜಾಕವೆಲ್ದಲ್ಲಿ ವಿಶ್ವ ಪರಿಸರ ದಿನಾಚರಣೆಯ ನಿಮಿತ್ಯ ಹಮ್ಮಿಕೊಳ್ಳಲಾದ ಸಸಿ ನೆಡುವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜೂನ 5 ರಂದು ವಿಶ್ವ ಪರಿಸರ ದಿನವನ್ನಾಗಿ ಆಚರಿಸುತ್ತಿದ್ದು , ಪರಿಸರ ಸಂರಕ್ಷಣೆ ಬಹಳ ಮಹತ್ವವಾದದ್ದು, ಗಿಡ ಬೆಳೆಸುವ, ಅದರ ರಕ್ಷಣೆ ಮಾಡುವ ಮನೋಭಾವನೆಯನ್ನು ಮಕ್ಕಳಲ್ಲಿ ಬೆಳೆಸಿ, ಪರಿಸರದ ಬಗ್ಗೆ ಕಾಳಜಿ ಮೂಡಿಸಿ, ಮರ ನೆಟ್ಟರೆ ಸಾಲದು. ವರ್ಷದುದ್ದಕ್ಕೂ ಅದರ ಬಗ್ಗೆ ಕಾಳಜಿ ವಹಿಸಿ ಅದನ್ನು ಬೆಳೆಸುವಂತಾಗಬೇಕು ಎಂದರು.

ಈ ಸಂದರ್ಭದಲ್ಲಿ ನಗರಸಭೆ ವ್ಯವಸ್ಥಾಪಕರಾದ ಸುರೇಶ ಬಾಗೇವಾಡಿ, ವಸಂತ ಪವಾರ, ಮುಕೇಶ ಬನಹಟ್ಟಿ, ಶಂಕರ ಮಾಂಗ, ಎಸ್. ಬಿ. ಹೊಸೂರ, ಶಿವಪುತ್ರ ಮೂಡಲಗಿ, ಎಂ. ಬಿ. ಮೋಕಾಶಿ, ರವಿಕುಮಾರ ಬಿರಾದಾರಪಾಟೀಲ, ಆರೋಗ್ಯ ನಿರೀಕ್ಷಕರಾದ ಶೋಭಾ ಹೊಸಮನಿ, ಸಂಗೀತಾ ಕೋಳಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

## ಸೂರು ಇಲ್ಲದೆ ಭಾರತ ದೇಶ ಸ್ವಾತಂತ್ರ ಪಡೆದು ಶತಮಾನದ ಹಾದಿಯಲ್ಲಿದ್ದರು ದಲಿತರ ಸ್ಥಿತಿಗತಿ ಬದಲಾಗುತ್ತಿಲ್ಲ, ಆಳುವಂತ ಸರ್ಕಾರಗಳು ಏನ್ ಮಾಡುತ್ತಿವೆ.....?



**ಬಣವಿಕಲ್ಲು :** ವಿಜಯನಗರ ಜಿಲ್ಲೆಯ ಕೂಡ್ಲಿಗಿ ತಾಲೂಕಿನ ಬಣವಿಕಲ್ಲು ಗ್ರಾಮದ ಅಂಬೇಡ್ಕರ್ ಕಾಲೋನಿಯ ನಿವಾಸಿಯಾದ ಬಸಾಪುರದ ದುರುಗಪ್ಪನ ಮಗ ದುರುಗಪ್ಪ ಹಾಗೂ ತನ್ನ ಹೆಂಡತಿ ಯಲ್ಲಮ್ಮ ಒಬ್ಬ ಮಗನು ಇದ್ದು. ಈ ದಲಿತ ಕುಟುಂಬಕ್ಕೆ ಸುಮಾರು 20 ವರ್ಷಗಳಿಂದ ಜಾಗ ಮತ್ತು ಮನೆ ಇಲ್ಲದೆ ಪಡಬಾರದ ಕಷ್ಟವನ್ನು ಅನುಭವಿಸುತ್ತ ಜೀವನ ಮಾಡಿಕೊಂಡು ಬಂದಿದ್ದೇವೆ ನಾವು ಸುಮಾರು ಬಾರಿ ಗ್ರಾಮ ಪಂಚಾಯಿತಿಗೆ ಅರ್ಜಿಗಳನ್ನು ಸಲ್ಲಿಸಿದರು. ಯಾವ ಅಧಿಕಾರಿಗಳು ನಾವು ಕೊಡುವಂತ ಅರ್ಜಿಗೆ ಕಿಮ್ಮತ್ತಿಲ್ಲ, ಹಾಗೆ ನಮ್ಮ ಗೋಳು ಕೇಳಿಸಿಕೊಳ್ಳುತಿಲ್ಲ, ಎಂದು ಯಲ್ಲಮ್ಮ ಅವರು ಕಣ್ಣೀರುಡುತ್ತಾ ತಮ್ಮ ಅಳಲನ್ನು ನಮ್ಮ ವಾಹಿನಿಗೆ ಹೇಳಿಕೊಂಡಿದ್ದಾರೆ.

ಈ ಸಂದರ್ಭದಲ್ಲಿ
ನಮ್ಮ ಈಗ ಜೀವನ ಈ ಸಮುದಾಯ ಭವನದಲ್ಲಿ ವಾಸ ಮಾಡುತ್ತಿದ್ದೇವೆ, ಈ ವ್ಯವಸ್ಥೆಯನ್ನು ಕೆಲವಾರು ಊರಿನ ಮುಖಂಡರುಗಳು ಈ ಭವನದಲ್ಲಿ ನಮ್ಮ ಕಷ್ಟವನ್ನು ನೋಡಲಾರದೆ ವಾಸ ಇರಲಿಕ್ಕೆ ಅವಕಾಶ ಮಾಡಿ ಕೊಟ್ಟಿದ್ದಾರೆ.

ನಾವು ಈ ಭವನದಲ್ಲಿ ಸುಮಾರು 2 ರಿಂದ 3 ತಿಂಗಳಿಂದ ವಾಸ ಮಾಡುತ್ತಿದ್ದೇವೆ. ಆದರೆ ಈ ಭವನವನ್ನು ಈಗ ಏಕಾಏಕಿಯಾಗಿ ಭವನವನ್ನು ಖಾಲಿ ಮಾಡಿ ಎಂದು ಹೇಳುತ್ತಿದ್ದಾರೆ, ನಾವು ಈಗ ಪ್ರಾರಂಭವಾಗಿರುವ ಮಳೆಗಾಲದಲ್ಲಿ ಎಲ್ಲಿಗೆ ಹೋಗಬೇಕು ಎಲ್ಲಿಗೆ ಅಂತಾ ನಾವು ಹೋಗಬೇಕು ಎಂದು ತಮ್ಮ ಕಣ್ಣೀರು ಹಾಕಿ ತಮ್ಮ ಮನದಾಳದ ಧರ್ಮ ಸಂಕಟವನ್ನು ಹೇಳಿ ಕೊಂಡರು,

ಈ ಸಂದರ್ಭದಲ್ಲಿ ಬಣವಿಕಲ್ಲು ಗ್ರಾಮದ ಸ್ಥಳೀಯರು ಭವನದ ಅಕ್ಕ ಪಕ್ಕದ ವೀರಶೈವ ಮಹಿಳೆಯರು ಗೌರಮ್ಮ, ನಾಗಮ್ಮ, ಅವರುಗಳು ನಿಜವಾದಂತ ನಿರ್ಗತಿಕರಿಗೆ, ಕಡು ಬಡವರಿಗೆ, ಮನೆ ಜಾಗವಿಲ್ಲದೆ ವಾಸ ಮಾಡುವಂತರಿಗೆ ಸರ್ಕಾರದವರು ಗುರುತಿಸಿ ಮನೆಗಳನ್ನು ಕೊಡಬೇಕು ಎಂದು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು, ಅದು ಏನೇ ಇರಲಿ ಈ ದಲಿತ ಕುಟುಂಬದವರಿಗೆ ಜಾಗ ಮನೆ ಮಾನ್ಯ ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ಪರಿಶೀಲಿಸಿ ನ್ಯಾಯ ಕೊಡಿ ಎಂದು ಗ್ರಾಮಸ್ಥ ಮಹಿಳೆಯರ ಕೂಗಾಗಿದೆ ಎಂದು ಕೇಳಿ ಕೊಂಡಿದ್ದಾರೆ.

**ಜಿಲ್ಲಾ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ರಾಘವೇಂದ್ರ.ಬಿ. ಸಾಲುಮನೆ ಕೂಡ್ಲಿಗಿ**

## ಕಲಕೇರಿ ಗ್ರಾಮದ ಹದಗೆಟ್ಟ ಬಸ್ ನಿಲ್ದಾಣವನ್ನು ಸರಿಪಡಿಸಲು ಸಾರ್ವಜನಿಕರಿಂದ ಒಕ್ಕೊರಲಿನ ಆಗ್ರಹ

**ಕಲಕೇರಿ :** ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲೂಕಿನ ಕಲಕೇರಿ ಗ್ರಾಮದ ಬಸ್ ನಿಲ್ದಾಣದ ಪರಿಸ್ಥಿತಿ ಹದಗೆಟ್ಟು ಹೋಗಿದೆ.

ಎರಡರಿಂದ ಮೂರು ವರ್ಷಗಳ ಕಾಲ ಆಯಿತು ಕಲಕೇರಿ ಬಸ್ ನಿಲ್ದಾಣದಲ್ಲಿ ಸಿಸಿ ರಸ್ತೆ ಆಗದ ಕಾರಣ ಸಂಬಂಧಪಟ್ಟ ಅಧಿಕಾರಿಗಳಿಗೆ ಎಷ್ಟು ಬಾರಿ ಹೇಳಿದರೂ ಕ್ಯಾರೆ ಅನ್ನುತ್ತಾರೆ ಮಳೆ ಬಂದರೆ ಸಾಕು ಬಸ್ಟ್ಯಾಂಡ್ ಒಳಗಡೆ ನಿಂತುಕೊಳ್ಳಲು ಸ್ಥಳ ಇರುವುದಿಲ್ಲ ಸಂಬಂಧಪಟ್ಟ ಅಧಿಕಾರಿಗಳು ಬೇಗನೆ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು ಬಸ್ಟ್ಯಾಂಡ್ ಒಳಗಡೆ ಸಿಸಿ ರಸ್ತೆ ಮಾಡಬೇಕು ನಮ್ಮ ಭಾಗದ ಶಾಸಕರು ಕೂಡ ಇದರ ಬಗ್ಗೆ ಗಮನ ಹರಿಸಬೇಕು ಅಧಿಕಾರಿಗಳನ್ನು ಕೇಳಿದರೆ ಇನ್ನೂ ಟೆ-ಂಡರ್ ಆಗಿಲ್ಲ ಸರ್ ಅಂತ ಹೇಳ್ತಾ ಇದ್ದಾರೆ ಯಾಕೆಂದರೆ ಮಳೆ ಬಂದರೆ ಸಾಕು ಜನರಿಗೆ ಬಸ್ಟ್ಯಾಂಡ್ ಒಳಗಡೆ ಹೋಗೋದಕ್ಕೆ ಬಸ್ ಸ್ಟಾಪ್ ನಲ್ಲಿ ಕೆಸರು ಗದ್ದೆಯಾಗಿದೆ ತಕ್ಷಣ ಸಂಬಂಧಪಟ್ಟ ಅಧಿಕಾರಿಗಳು ಬೇಗನೆ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು ಕಲಕೇರಿ ಬಸ್ಟ್ಯಾಂಡ್ ಒಳಗಡೆ ಸಿಸಿ ರಸ್ತೆ ಮಾಡಬೇಕು ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಇದರ ಬಗ್ಗೆ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರ ಆಗ್ರಹ ಆಗಿದೆ.

**ತಾಲೂಕ ವರದಿಗಾರರು ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಮೈಬೂಬಬಾಷ ಮನಗೂಳಿ ತಾಳಿಕೋಟೆ.**




## ವಿಶ್ವ ಪರಿಸರ ದಿನ: ಪೊಲೀಸ್ ಠಾಣೆಯಲ್ಲಿ ನೂರು ಸಸಿಗಳನ್ನು ಹಚ್ಚುವ ಕ್ರಮ



**ತೇರದಾಳ :** ವಿಶ್ವ ಪರಿಸರ ದಿನಾಚರಣೆ ನಿಮಿತ್ತ ಇಲ್ಲಿನ ಪೊಲೀಸ್ ಠಾಣೆಯಲ್ಲಿ ಸಸಿ ನೆಡುವ ಕಾರ್ಯಕ್ರಮ ಜರುಗಿತು.

ಸಸಿ ನೆಟ್ಟು ಮಾತನಾಡಿದ ಠಾಣಾಧಿಕಾರಿ ಅಪ್ಪು ಐಗಳಿ, ಪೊಲೀಸ್ ಠಾಣೆಯಲ್ಲಿ ಸುಮಾರು ನೂರು ಸಸಿಗಳನ್ನು ಹಚ್ಚುವ ಕ್ರಮ ಕೈಗೊಳ್ಳಲಾಗಿದ್ದು, ಈಗಾಗಲೇ ಸಸಿಗಳನ್ನು ತರಲಾಗಿದೆ. ಠಾಣೆಯ ಆವರಣ ವಿಶಾಲ ಆಗಿರುವುದರಿಂದ ಸಸಿ ಹಚ್ಚಲು ಅನುಕೂಲಕರವಾಗಿದೆ ಎಂದು ಹೇಳಿದರು.

ಪರಿಸರ ಸಂರಕ್ಷಣೆ ಮಾಡದಿದ್ದರೆ ಮುಂದಿನ ದಿನಗಳಲ್ಲಿ ಬಹಳಷ್ಟು ತೊಂದರೆ ಅನುಭವಿಸಬೇಕಾಗುತ್ತದೆ. ಪರಿಸರ ಹಾಳು ಮಾಡುವುದರಿಂದ ನಮ್ಮ ಬದುಕನ್ನು ನಾವೇ ಹಾಳು ಮಾಡಿಕೊಂಡಂತೆ. ಆದ್ದರಿಂದ ಮನೆಗೊಂದು ಸಸಿ ನೆಡುವ ಕೆಲಸ ಮಾಡಬೇಕು. ಹಾಗೂ ಅದನ್ನು ಬೆಳೆಸುವ ಕೆಲಸವೂ ಮಾಡಬೇಕೆಂದು ಹೇಳಿದರು.

ವಿವೇಕ ಸುವರ್ಣಖಂಡಿ, ಅಶೋಕ ಸವದಿ, ಕೆ.ಎಚ್. ಸನಹಟ್ಟಿ, ವಿಠ್ಠಲ ಮಾನೆ, ಸಾತಾನಿ, ಲಕ್ಷ್ಮಣ ಇಮ್ಮಡಿ, ಪಿ.ಎಚ್. ಗಣಿ, ಸುನೀಲ ಮದಲಮಟ್ಟಿ, ಧರೆನ್ನವರ ಮತ್ತಿತರಿದ್ದರು.

## ನೀಟ್ ಪರೀಕ್ಷೆಯಲ್ಲಿ ಕೊಣ್ಣೂರು ವಿಜ್ಞಾನ ಪಿಯು ಕಾಲೇಜ್ ದಾಖಲೆಯ ಸಾಧನೆ



**ರಬಕವಿ-ಬನಹಟ್ಟಿ :** ವೈದ್ಯಕೀಯ ಹಾಗೂ ದಂತ ವೈದ್ಯಕೀಯ ಕೋರ್ಸುಗಳ ಪ್ರವೇಶಾತಿಗಾಗಿ ನಡೆಸುವ ರಾಷ್ಟ್ರಮಟ್ಟದ ಎನ್.ಇ.ಇ.ಟಿ. ನೀಟ್ ಪರೀಕ್ಷೆಯಲ್ಲಿ ಕೊಣ್ಣೂರು ವಿಜ್ಞಾನ ಪದವಿಪೂರ್ವ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಅತ್ಯುತ್ತಮ ಸಾಧನೆ ಮಾಡಿದ್ದಾರೆ ಎಂದು ಪ್ರಾಚಾರ್ಯರಾದ ಪ್ರೊ. ಬಸವರಾಜ ಕೊಣ್ಣೂರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನೀಟ್ ಪರೀಕ್ಷೆಯ 720 ಅಂಕಗಳಿಗೆ ನಮ್ಮ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಪಡೆದ ಅಂಕಗಳ ವಿವರ ಇಂತಿದೆ 1.ನಿರಂಜನ್ ಬಾಬಾಗೌಡ ಪಾಟೀಲ(640), 2.ಸ್ಫೂರ್ತಿ ಪಾಟೀಲ(635), 3.ಸೃಜನಾ ಮುರಗಿ(632), 4.ಸಾಗರ ಕಮತೆ(625), 5.ಭೀಮಾಶಂಕರ ಆಲಬಾಳ(620), 6.ಶಿವಶಂಕರ ಶ್ರೀಶೈಲ ಹೆಬ್ಬಳ್ಳಿ(615), 7. ಐಶ್ವರ್ಯ ಬುದಶೆಟ್ಟಿ(611), 8.ಸುದೀಪ ಬಾವಲತ್ತಿ(594), 9.ಸುಜಾತಾ ಬೆನ್ನಾಳೆ(589), 10.ದರ್ಶನ ಪಾರಿಶನಾಥ ತೇರದಾಳ(585)11.ಪೃಥ್ವಿ ಬಳೋಲ(582), 12.ಪ್ರಿಯಂಕಾ ಮುಚ್ಚಂಡಿ(579), 13.ನಂದಿನಿ ಹೆಜ್ಜೆಗಾರ(577), 14. ರಾಜೇಶ ಕರೋಳಿ(565), 15.ವಿನಾಯಕ ಪಾಟೀಲ(560), 16.ತನುಶ್ರೀ ಸಂಗಪ್ಪ ಗಲಗಲಿ(553), 17.ರಾಕೇಶ ಬಾಪರಿ(532), 18.ಪ್ರಿಯಾಂಕಾ ಭೀಮಪ್ಪ ಅಂಬಾನ್ನಗೋಳ(531), 19.ಸವಿತಾ ನಡಕಟ್ಟಿ (517), 20.ತೇಜಶ್ವಿನಿ ಶಿವಲಿಂಗಪ್ಪ ಕಡಪಟ್ಟಿ(516), 21.ಅನುಪಮಾ ಕುಮಾರ ಒಡೆಯರ(510), 22.ಅನ್ನಪೂರ್ಣ ವಾಲಿಕರ(509)

ಈ ಎಲ್ಲಾ ಸಾಧಕರಿಗೆ ಸಂಸ್ಥಾಪಕ ಪ್ರಾಚಾರ್ಯ ಪ್ರೊ. ಬಸವರಾಜ ಕೊಣ್ಣೂರ, ಆಡಳಿತಾಧಿಕಾರಿ ಶೀತಲ ಕೊಣ್ಣೂರ, ಉಪಪ್ರಾಚಾರ್ಯ ಶಿವಾನಂದ ಕಂದಗಲ್ ಹಾಗೂ ನೀಟ್ ವಿಶೇಷ ತರಬೇತಿ ನೀಡಿದ ಉಪನ್ಯಾಸಕರು ಮತ್ತು ಸಿಬ್ಬಂದಿ ವರ್ಗದವರು ಅಭಿನಂದನೆ ಸಲ್ಲಿಸಿದ್ದಾರೆ.

## ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು: ನ್ಯಾ. ದಾನೇಶ ಅವಟಿ




**ವಿಜಯಪುರ :** ಸರಕಾರ ಇಂದು ಕಡ್ಡಾಯ ಶಿಕ್ಷಣ ಯೋಜನೆ ಜಾರಿಗೆ ತಂದಿದ್ದು.ಯಾವುದೇ ಮಗು ಶಾಲೆ ತೊರೆದು ಶಿಕ್ಷಣದಿಂದ ವಂಚಿತರಾಗಬಾರದು ಎಂದು ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಸದಸ್ಯ ನ್ಯಾಯವಾದಿ ದಾನೇಶ ಅವಟಿ ನುಡಿದರು. ಬಸವ ನಗರದ ಫ್ಯಾಂಟಸಿ ಕಿಡ್ಸ್ ಝೋನ್ ಸ್ಕೂಲ್ ನಲ್ಲಿ ಸ್ಪಂದನ ಸ್ವಯಂ ಸೇವಾ ಸಂಸ್ಥೆ ಹಾಗೂ ಸಮಪ್ರಭ ಏಜುಕೇಶನ್ ಆಂಡ್ ಯೂಥ್ ವಾಲೆಂಟಿಯರ್ ಆಶೋಷಿಯೇಷನ್ ಸಹಯೋಗದಲ್ಲಿ ವಜ್ರಹನು ಮನಗುಡಿ ಹತ್ತಿರಬಯಲಿನಲ್ಲಿ ಇರುವ ನಿರಾಶ್ರಿತ ಕುಟುಂಬಗಳ ಮಕ್ಕಳಿಗೆ ಕಲಿಕಾ ಕೇಂದ್ರದ ಮೂಲಕ 21ದಿನಗಳ ಶೈಕ್ಷಣಿಕ ಸಮಾರೋಪ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು ಶಿಕ್ಷಣ ಎಲ್ಲರ ಬಾಳಿಗೆ ಬೆಳಕಾಗಿದ್ದು.ಅತ್ಯಂತ ಅವಶ್ಯವಾಗಿದೆ ಅದರಲ್ಲು ಸಮಾಜದ ಮುಖ್ಯ ವಾಹಿನಿಯಿಂದ ದೂರವಿರುವ. ಕಡು ಬಡತನದ, ಪ್ಲಾಸ್ಟಿಕ್‌ಕೊಡ,ಬ್ಯಾಗುಗಳಿಗೆಜಿಪ್‌ಹಾಕುವುದು,ಗ್ಯಾಸ್ ರಿಪೇರಿ ಮುಂತಾದ ಕಾರ್ಯಗಳಲ್ಲಿ ತೊಡಗಿರುವ ಬೇರೆ ಕಡೆಯಿಂದ ಬಂದು ಬಿಜಾಪುರದಲ್ಲಿ ನೆಲೆಸಿರುವ ನಿರಾಶ್ರಿತರ ಮಕ್ಕಳಿಗೆ ಶಿಕ್ಷಣದ ಅವಶ್ಯಕತೆ ಇದೆ.ಅಂಥಹ ಕುಟುಂಬಗಳನ್ನು ಗುರುತಿಸಿ.ಮಕ್ಕಳನ್ನುಕಲಿಕಾ ಕೇಂದ್ರಕ್ಕೆ ಕರೆತಂದು ಉಚಿತವಾಗಿ ಮಕ್ಕಳಿಗೆ ವಿದ್ಯೆ. ವಿನಯ.ಸಂಸ್ಕಾರ ತುಂಬುವದರೊಂದಿಗೆ.ಊಟ. ತಿಂಡಿ. ಬಟ್ಟೆ.ಕಲಿಕಾ ಸಾಮಗ್ರಿ ನೀಡುವದರ ಮೂಲಕ ಸ್ಪಂದನ ಹಾಗೂ ಸಮಪ್ರಭ ಸಂಸ್ಥೆಗಳು ಫಲಾಪೇಕ್ಷೆ ಇಲ್ಲದೇ ಮಕ್ಕಳ ಶೈಕ್ಷಣಿಕ ಸೇವೆ ಮಾಡುತ್ತಿವೆ. ಇವರಿಗೆ ಸರ್ಕಾರ ಸಂಘ ಸಂಸ್ಥೆ ಹಾಗೂ ಸಾರ್ವಜನಿಕರು ಕೈ ಜೋಡಿಸಿ ಪ್ರೋತ್ಸಾಹಿಸಬೇಕು ಎಂದರು.

ಸಮಪ್ರಭ ಸಂಸ್ಥೆಯ ಅಧ್ಯಕ್ಷ ನ್ಯಾಯವಾದಿ ಪ್ರಶಾಂತ ದೇಶಪಾಂಡೆ ಅವರು ವಜ್ರ ಹನುಮಾನ ದೇವಸ್ಥಾನ ಹತ್ತಿರ ಇರುವ ಬಯಲು ಪ್ರದೇಶದಲ್ಲಿ ಹೊಟ್ಟೆ ಹೊರೆಯಲು ಬೇರೆ ಬೇರೆ ರಾಜ್ಯ.ಜಿಲ್ಲೆಗಳಿಂದ ವಲಸೆ ಬಂದ ನಿರಾಶ್ರಿತರ ಅಲೆಮಾರಿ ಕುಟುಂಬಗಳ ಮಕ್ಕಳು ಇಲ್ಲಿ ಓದುತ್ತಿದ್ದಾರೆ.ಬೆಳಿಗ್ಗೆ ಎದ್ದ ತಕ್ಷಣ ಉಪಜೀವನಕ್ಕಾಗಿ ವಿವಿಧ ವ್ಯಾಪಾರ.ಉದ್ಯೋಗ ಮಾಡಿಕೊಂಡುಹೋಗುವತಂದೆತಾಯಿಗಳು.ಚೂರು ಪಾರು ತಿನ್ನಲು ನೀಡಿ.ಕೈಗೆ ಚಿಲ್ಲರೆ ಕಾಸು ಕೊಟ್ಟು ದುಡಿಮೆಗೆ ಹೋಗುವು ಅವರ ಮಕ್ಕಳನ್ನು ನಮ್ಮ ತಂಡದ ಸದಸ್ಯರು ಮಾತನಾಡಿ.ಮನ ಒಲಿಸಿ.ಶಾಲೆಯ ಕೋಣೆಯೊಂದರಲ್ಲಿಮಕ್ಕಳನ್ನುವಾಹನಗಳಮೂಲಕ ಕರೆತಂದು.ಬೆಳಿಗ್ಗೆಯಿಂದ ಸಾಯಂಕಾಲವರೆಗೆನುರಿತ ಶಿಕ್ಷಕಿಯರ ಮೂಲಕ ಅನ್ನ ಉಣಿಸಿ.ಬಟ್ಟೆ ಬರೆ ನೀಡಿ. ಅಕ್ಷರಾಭ್ಯಾಸ ಮಾಡಿಸಿದ ತೃಪ್ತಿ ತಮಗಿದ್ದು.ಇನ್ನೂ ಈ ಮಕ್ಕಳ ನಿರಂತರ ಕಲಿಕೆಗೆ ಅವಕಾಶ ಕಲ್ಪಿಸಬೇಕಾಗಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಸ್ಪಂದನ ಸ್ವಯಂ ಸೇವಾ ಸಂಸ್ಥೆ ಹಾಗೂ ನಿಕಟಪೂರ್ವ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಅಧ್ಯಕ್ಷ ಮಹದೇವಪ್ಪ ದೇವರ ಅವರು ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು. ಶಾಲೆಯಿಂದ ಹೊರಗುಳಿಯಬಾರದು ಎಂದು ಸರ್ಕಾರ ಅನೇಕ ಯೋಜನೆಗಳನ್ನು ಜಾರಿಗೆ ತಂದಿದ್ದು ಆದರೆ ಅವು ಪರಿಣಾಮಕಾರಿಯಾಗಿ ಜಾರಿಗೆ ಬಾರದ ಕಾರಣ ಮಕ್ಕಳು ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ. ಇದರಲ್ಲಿ ಪಾಲಕರ.ಪೋಷಕರ ನಿರ್ಲಕ್ಷತೆಯಿಂದಲೂ ಶಾಲೆಯಿಂದ ಹೊರಗುಳಿಯುತ್ತಾರೆ.ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು.ಹಾಗು ಮಕ್ಕಳ ಹಕ್ಕುಗಳು ಅವರಿಗೆ ದೊರೆಯಬೇಕು ಎಂಬ ಸದುದ್ದೇಶದಿಂದ ಈ ಕಲಿಕಾ ಕೇಂದ್ರ ಸ್ಥಾಪಿಸಿದ್ದೇವೆ. ಕೋವಿಡ್ ಸಂದರ್ಭದಲ್ಲಿ ಕೂಡ ನಮ್ಮ ಸಂಸ್ಥೆ ಆಹಾರ.ಬಟ್ಟೆ.ಔಷಧಿ.ಹಾಲು ಹಣ್ಣು ವಿತರಿಸಿದ್ದೇವೆ. ಮುಂದೆಯೂಇನ್ನೂಅನೇಕವಿದಾಯಕಕಾರ್ಯಕ್ರಮ ಹಮ್ಮಿಕೊಳ್ಳುತ್ತೇವೆ ಎಂದರು. ವೇದಿಕೆಯಲ್ಲಿ ಸಮಪ್ರಭ ಸಂಸ್ಥೆ ಕಾರ್ಯದರ್ಶಿ ಬಸವರಾಜ ಚೌಧರಿ. ಆಡಳಿತ ಅಧಿಕಾರಿ ಸುಮಾ ಚೌಧರಿ. ವಿಶೇಷ ತರಬೇತುದಾರರಾಗಿ.ಶ್ರೀಮತಿದ್ರಾಕ್ಷಯಣಿಹಿರಾಪುರ. ಜಾನ್ವಿ ಪಂಡಿತ್ ನೀಡಿದರು. ಸ್ಪಂದನ ಸಂಸ್ಥೆ ಜಿಲ್ಲಾ ಸಂಯೋಜಕ ಸಂಗಮೇಶ ರಾಮಗೊಂಡ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಶಿಕ್ಷಕಿ ಪ್ರತಿಭಾ ದಿವಟರನಿರೂಪಿಸಿದರು.ಸರಳಾಇಂಡಿವಂದಿಸಿದರು. ಮಕ್ಕಳಿಗೆ ಪೆನ್ನು ಪುಸ್ತಕ. ಸ್ಕೂಲ್ ಬ್ಯಾಗ್.ಬಟ್ಟೆ ವಿತರಣೆ ಯೊಂದಿಗೆ ಕಾರ್ಯಕ್ರಮ ಯಶಸ್ವಿಯಾಗಿ ಕೊನೆಗೊಂಡಿತು.

# ಸನಾತನ ಧರ್ಮ ಬಹಳೇ ಆದಿಕಾಲದ್ದು-ಜೋಶಿ

**ತಾಳಿಕೋಟೆ :** ಭಾರತ ದೇಶದಲ್ಲಿ ಹಲವಾರು ಮತ-ಪಂತಗಳು ಇದ್ದರೂ ವಿಶೇಷವಾಗಿ ಶ್ರೇಷ್ಠವಾದ ಧರ್ಮವೆಂದರೆ ಅದು ಹಿಂದೂ ಧರ್ಮ ಇದಕ್ಕೆ ಸಾವಿರಾರು ವರ್ಷಗಳ ಸನಾತನ ಧರ್ಮದ ಇತಿಹಾಸವಿದೆ ಎಂದು ಶಿವಭವಾನಿ ಮಂದಿರದ ಅರ್ಚಕರಾದ ವೇ.ಸಂತೋಷಬಟ್ ಜೋಶಿ ಅವರು ನುಡಿದರು.



ರವಿವಾರರಂದು ಸ್ಥಳೀಯ ಅನ್ನಪೂರ್ಣೇಶ್ವರಿ ಭಜನಾ ಮಂಡಳಿಯವರ ವತಿಯಿಂದ ಶ್ರೀ ಅಂಬಾಭವಾನಿ ಮಂದಿರದಲ್ಲಿ ಏರ್ಪಡಿಸಲಾದ ಶ್ರೀ ಸಾಯಿ ಬಾಬಾ ವಸಂತೋತ್ಸವ ಕಾರ್ಯಕ್ರಮದಲ್ಲಿ ದಿವ್ಯ ಸಾನಿದ್ಯ ವಹಿಸಿ ಮಾತನಾಡುತ್ತಿದ್ದ ಅವರು ಇಂತಹ ಮಹತ್ವದ ಸನಾತನ ಧರ್ಮವನ್ನು ಈ ಆಳ್ವಿಕೆ ಮಾಡಿದವರು ನಾಶ ಮಾಡಲು ಬಂದು ಈ ದೇಶದ ಸಂಸ್ಕೃತಿಯನ್ನು ಹಾಳು ಮಾಡಬೇಕೆಂದು ಪ್ರಯತ್ನಿಸಿದರೂ ಅದು ಹಾಳಾಗಲಿಲ್ಲಾ ಸೂರ್ಯ, ಚಂದ್ರ, ಅಗ್ನಿ ಪೂಜಿಸುವ ಸಂಸ್ಕೃತಿ ನಮ್ಮದಾಗಿದೆ ಶಂಕರಾಚಾರ್ಯರು ಜನ್ಮ ತಾಳಿದ ನಂತರ ಈ ನಮ್ಮ ಸಂಸ್ಕೃತಿ ಉಳಿಸಿ ಬೆಳೆಸಲು ಅನುವು ಮಾಡಿಕೊಟ್ಟರೆಂದರು. ಛತ್ರಪತಿ ಶಿವಾಜಿ ಮಹಾರಾಜರು ಹುಟ್ಟಿಬಂದು ಈ ಹಿಂದೂ ಧರ್ಮವನ್ನು ಉಳಿಸಿದರು ತಾಯಿ ಜೀಜಾಬಾಯಿಯ ಅಪೇಕ್ಷೆಯಂತೆ ಶೂರನಾದ ಶಿವಾಜಿ ಮಹಾರಾಜರು ತಾಯಿಯಕನಸ್ಸುನನಸ್ಸುಮಾಡಿದರೆಂದರು. ನಮ್ಮ ದೇಶದ ಸಲುವಾಗಿ ಅನೇಕ ಜನರು ಪ್ರಾಣ ತೆತ್ತಿದ್ದಾರೆ ಧರ್ಮ ಜಾಗೃತಿಯಾಗಿದೆ ಶ್ರೀ ರಾಮ ಮಂದಿರ ಪ್ರತಿಷ್ಠಾಪನೆಯಾಗಿ 500 ವರ್ಷಗಳ ಇತಿಹಾಸ ನೆನಪಿಸಿದೆ ಎಂದರು. ಗೋದಾವರಿ ನಧಿ ತೀರದಲ್ಲಿ ಶಿರಡಿ ಅನ್ನುವಂತಹ ಕ್ಷೇತ್ರದಲ್ಲಿ ಬಾಲಕನ ವೇಷದಿಂದ ಬಂದ ಸಾಯಿಬಾಬಾರವರು ಸರ್ವಸಂಗ ಪರಿತ್ಯಾಗಿಯಾಗಿ ಅವರು ಹೇಳಿದ ಹಾಗೆ ಅಂದದ್ದು ಅಂದಹಾಗೆ ಆಗುತ್ತಾ ಸಾಗುತ್ತಿತ್ತು ಯಾವ ರೀತಿ ಬಂದು ಬಳಗವಿಲ್ಲದೇ ಸಾಯಿಬಾಬಾರಿದ್ದರೋ ಹಾಗೆ ನರೇಂದ್ರ ಮೋದಿ ಅವರು ದೇಶ ವ್ಯಾಪಿ ಜನರಿಗಾಗಿ ಶ್ರಮಿಸುತ್ತಿದ್ದಾರೆ ಇಂತಹ ಶ್ರೀಗಳು ಜನ್ಮ ಭಾರತ ದೇಶದಲ್ಲಿ ಜನ್ಮ ತಾಳಿದ್ದರಿಂದ ಭಾರತ ದೇಶ ವಿಶ್ವಗುರು ಆಗಿದೆ ಎಂದರು.

ಇನ್ನೋರ್ವ ಕಾರ್ಯಕ್ರಮದ ದಿವ್ಯ ಸಾನಿದ್ಯ ವಹಿಸಿದ ವೇ.ವಸಂತ ಜೋಶಿ ಅವರು ಮಾತನಾಡಿ ಸಾಯಿಬಾಬಾರವರಾಗಲಿ ಸ್ವಾಮಿ ಸಮರ್ಥರಾಗಲಿ ಇವರೆಲ್ಲರಿಗೂ ದತ್ತಾವತಾರಿಗಳು ಎಂದು ಹೇಳಲಾಗುತ್ತದೆ ಈ ಎಲ್ಲ ಸಂತರು ಮಾಡಿದ ಪವಾಡಗಳು ಜರುಗುತ್ತವೆ ಪವಾಡಗಳಿಗೆ ಹುಟ್ಟು ಸಾವುಗಳಿಲ್ಲಾ ಹಾಗೆಯೇ ಪವಾಡಗಳು ಜರುಗುತ್ತಾ ಸಾಗಿಬಂದಿವೆ ಎಂದರು. ಸಂತರ ಸಂದೇಶಗಳು ಸಾವಿರಾರು ಇವೆ ಎಂದು ಹೇಳಿದ ಜೋಶಿ ಅವರು ಬ್ರಹ್ಮ ಸೂತ್ರ ಸರಳ ಸಂದೇಶ ಕುರಿತು ವಿವರಿಸಿದ ಅವರು ನಗು ನಗುತ್ತಾ ಸಂಪತ್ತು ಇದ್ದರೆ ಎಲ್ಲರೂ ಬರುತ್ತಾರೆ ಟೀಕೆ ಟಿಪ್ಪಣಿಗಳಿಗೆ ಕಿವಿಗೊಡದಿರಿ ಎಂದು ಶ್ರೀ ರಾಮಚಂದ್ರನ ಇತಿಹಾಸವನ್ನು ವಿವರಿಸಿ ಮನವರಿಕೆ ಮಾಡಿದರು.

ಇನ್ನೋರ್ವ ಶ್ರೀ ಅಂಬಾಭವಾನಿ ಮಂದಿರದ ಅರ್ಚಕರಾದ ವೇ.ಭೀಮಾಶಂಕರ ಗುರೂಜಿ ಅವರು ಮಾತನಾಡಿ ಗುರುಗಳ ಸೇವೆ ದೇವ ಭಕ್ತಿ ಎಂಬವುಗಳು ಸಾಮಾನ್ಯವಲ್ಲಾ ಆ ಭಕ್ತಿ ಎಂಬುದು ಎಲ್ಲರಲ್ಲಿ ಬರಬೇಕೆಂದರು. ದೇವರನ್ನು ಗುರುವಿನ ರೂಪದಲ್ಲಿ ಕಾಣಬಹುದು ಮಹಾತ್ಮರು, ಸಂತರು, ಸತ್ಪುರುಷರು, ಸಂತ ತುಕಾರಾಮ ಮಹಾರಾಜ, ಸಾಯಿಬಾಬಾರವರು, ಸದಾನಂದ ಮಹಾರಾಜರು, ಭೀಮಾಶಂಕರರು ಇವರೆಲ್ಲರೂ ದತ್ತಾವತಾರಿಗಳಾಗಿದ್ದರೆಂದರು. ಗುರು ನಾಮ ಸ್ಮರಣೆಯಿಂದ ಫಲ ದೊರೆಯುತ್ತದೆ ಈಸ್ಮರಣೆಎಂಬುದುಬ್ಯಾಂಕಿನಲ್ಲಿಡಿಫಾಜಿಟ್ ಇಟ್ಟಂತೆ ಸತ್ಸಂಗ ನಾಮ ಸ್ಮರಣೆ ಮಾಡಬೇಕು ರಾಮ ಎಂದರೆ ನಾಮ ಸ್ಮರಣೆಯಾಗುತ್ತದೆ ರಾಮ ಎಂದರೆ ಕೆಟ್ಟದ್ದು ಹೊರಗೆ ಹೋಗಿ ಶುದ್ದವಾದುದ್ದು ದೇಹದಲ್ಲಿ ಬರುತ್ತದೆ ಎಂದರು. ಭಕ್ತಿ ಎನ್ನುವದು ಯಾವ ರೀತಿ ಕೆಲಸ ಮಾಡುತ್ತದೆ ಎಂಬುದರ ಕುರಿತು ತಾಯಿ ಕೌಶಲ್ಯ ರಾಮನ ಸಮುದ್ರ ರಾಜನ ಮೇಲಿಟ್ಟ ಪ್ರೀತಿ ಕುರಿತು ಕಥೆಯೊಂದನ್ನು ವಿವರಿಸಿದರು.

ಇನ್ನೋರ್ವ ಅತಿಥಿ ಹಿರಿಯ ಪತ್ರಕರ್ತರಾದ ಜಿ.ಟಿ.ಘೋರ್ಪಡೆ ಅವರು ಮಾತನಾಡಿ ತಾಳಿಕೋಟೆಯಲ್ಲಿ ಸಾಯಿಬಾಬಾ ಅನ್ನುವಂತಹ ಮಂದಿರ ಸುಮಾರು 3 ಮಂದಿರಗಳು ನಿರ್ಮಾಣಗೊಳ್ಳುತ್ತಾ ಸಾಗಿವೆ ಈ ಸಾಯಿಬಾಬಾನ ಭಕ್ತರು ಸಾಯಿ ಬಾಬಾರವರ ಮೇಲಿಟ್ಟ ಪ್ರೀತಿ ಭಕ್ತಿಯೇ ಕಾರಣವಾಗಿದೆ ಎಂದರು. ವಸಂತೋತ್ಸವ ಕಾರ್ಯಕ್ರಮವೆಂಬುದು ಕೇವಲ ಇಂದು ತಾಳಿಕೋಟೆಯಲ್ಲಿ ಅಷ್ಟೇ ನಡೆದಿಲ್ಲಾ ಇದು ದೇಶ ವ್ಯಾಪ್ತಿ ನಡೆದಿದೆ ದೇಶ ವ್ಯಾಪ್ತಿಯೂ ಶ್ರೀ ಸಾಯಿಬಾಬಾರವರ ಮಹಾ ಪೂಜಾ ಕಾರ್ಯಕ್ರಮ ನಡೆಯುವ ದಿನ ಇಂದಾಗಿದೆ ಎಂದುಹೇಳಿದ ಅವರು ಸಾಯಿಬಾಬಾರವರ ಪವಾಡಗಳ ಕುರಿತು ಅವರು ಮಾಡಿದ ಭ-ಕ್ತೋದ್ದಾರ, ಜನೋದ್ದಾರ ಕುರಿತು ಪ್ರಚಾರ ಪಡಿಸುತ್ತಾ ಸಾಗಿದ ಆನಂದ ಕುಲಕರ್ಣಿ ಅವರ ಸೇವಾ ಕಾರ್ಯ ಮಹತ್ವದ್ದಾಗಿದೆ ಎಂದರು.

ವೇದಿಕೆ ಮೇಲೆ ಭಾವಸಾರ ಕ್ಷತ್ರೀಯ ಸಮಾಜದ ಹಿರಿಯರಾದ ಎಲ್.ವ್ಹಿ. ಮಹೇಂದ್ರಕರ, ಶ್ರೀಧರ ಗ್ರಾಂಪೂರೋಹಿತ, ವಿಜಯ ಮಹೇಂದ್ರಕರ, ನಾಗೇಶ ಮಹೇಂದ್ರಕರ, ಆನಂದ ಕುಲಕರ್ಣಿ, ಸತೀಶ ದಪ್ತೆದಾರ, ದತ್ತಾ ಮಹೇಂದ್ರಕರ, ತಿಳಗೂಳ ಸರ್, ಹಾಗೂ ಮಾತೆಯರು ಉಪಸ್ಥಿತರಿದ್ದು ಸಾಯಿ ಭಜನಾ ಕಾರ್ಯಕ್ರಮ ನಡೆಸಿಕೊಟ್ಟರು.

# ಚಿಕ್ಕೋಡಿ: ವಸತಿ ನಿಲಯ ಸ್ಥಳಾಂತರಕ್ಕೆ ಸೂಚನೆ

**ಚಿಕ್ಕೋಡಿ :** ಪಟ್ಟಣದ ಇಂದಿರಾನಗರ ಬಡಾವಣೆಯಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸೇರಿದ ಮೆಟ್ರಿಕ್ ಪೂರ್ವ ಬಾಲಕಿಯರ ವಸತಿ ನಿಲಯ ದುಃಸ್ಥಿತಿಯ ಕುರಿತು ಮೇ 29ರಂದು 'ಪ್ರಜಾವಾಣಿ'ಯಲ್ಲಿ ವಿದ್ಯಾರ್ಥಿನಿಯರ ವಸತಿ ನಿಲಯ ದುಸ್ಥಿತಿ ಕುರಿತು ವಿಶೇಷ ವರದಿ ಪ್ರಕಟಗೊಂಡಿತ್ತು. ವರದಿಯ ಪರಿಣಾಮವಾಗಿ ಬೆಳಗಾವಿಯ ಸಮಾಜ ಕಲ್ಯಾಣ ಇಲಾಖೆಯಜಂಟಿನಿರ್ದೇಶಕನವೀನಶಿಂತ್ರೆವಸತಿನಿಲಯಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಕೂಡಲೇ ಬೇರೊಂದು ಸುಸಜ್ಜಿತ ಕಟ್ಟಡವನ್ನು ಬಾಡಿಗೆಗೆ ಪಡೆದು ವಸತಿ ನಿಲಯ ಸ್ಥಳಾಂತರ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿ, ಸಾಮಾಜಿಕ ಕಳಕಳಿಯನ್ನು ಶ್ಲಾಘಿಸಿದ್ದಾರೆ.

ವಸತಿ ನಿಲಯದ ಕಟ್ಟಡ ಹಳೇಯದಾಗಿದ್ದರಿಂದ ಬೀಳುವ ಸ್ಥಿತಿಯಲ್ಲಿದೆ. ಬಿರುಕು ಬಿಟ್ಟ ಗೋಡೆಗಳು, ತುಕ್ಕು ಹಿಡಿದ



ಚಾವಣಿಯ ಕಬ್ಬಿಣದ ಸರಳುಗಳು ಹೊರ ಬಂದಿದ್ದನ್ನು ವೀಕ್ಷಿಸಿ, ಮಕ್ಕಳ ವಾಸಕ್ಕೆ ಯೋಗ್ಯವಲ್ಲದ ಕಟ್ಟಡ ಇದಾಗಿದೆ ಎಂದು ಸ್ಥಳೀಯ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.

ವಸತಿನಿಲಯದಚಾವಣಿಯಸಿಮೆಂಟ್‌ಉದುರಿಬೀಳುತ್ತಿದ್ದು, ಮಳೆಗಾಲದಲ್ಲಿಇದುಇನ್ನೂಹೆಚ್ಚಾಗುವಸಾಧ್ಯತೆಇದೆಎಂದು ಲೋಕೋಪಯೋಗಿ ಇಲಾಖೆಯ ಎಂಜಿನಿಯರ್ ವರದಿ ನೀಡಿದ್ದಾರೆ.ಬಾಡಿಗೆಕಟ್ಟಡದಲ್ಲಿಕೆಲವುದುರಸ್ತಿಕೆಲಸಗಳಿರುವ ಕಾರಣ ಮೂರ್ನಾಲ್ಕು ದಿನಗಳಲ್ಲಿ ಹೊಸ ಬಾಡಿಗೆ ಕಟ್ಟಡಕ್ಕೆ ವಸತಿ ನಿಯಲ ಸ್ಥಳಾಂತರಿಸಲು ಸ್ಥಳೀಯ ಅಧಿಕಾರಿಗಳು ನಿರ್ಧರಿಸಿದ್ದಾರೆ. 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಾಸಿಸಲು ಅನುಕೂಲವಾಗುವ ಬಾಡಿಗೆ ಕಟ್ಟಡವನ್ನು ಪಟ್ಟಣದ ಹೃದಯ ಭಾಗದಲ್ಲಿ ಗುರುತಿಸಲಾಗಿದೆ ಎಂದು ಚಿಕ್ಕೋಡಿಯ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಪ್ರವೀಣ ಪಾಟೀಲ ತಿಳಿಸಿದ್ದಾರೆ. ಚಿಕ್ಕೋಡಿ ಸಮಾಜ ಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಪ್ರವೀಣ ಪಾಟೀಲ, ಹಾಸ್ಟೆಲ್ ವಾರ್ಡನ್ ಸಮೀನಾ ನದಾಫ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

## ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಸಂಯುಕ್ತ ರಸಗೊಬ್ಬರಗಳ ಬಳಕೆ ಮಾಡುವಂತೆ ಕೃಷಿ ಇಲಾಖೆಯಿಂದ ರೈತರಿಗೆ ಸಲಹೆ

**ಕೊಪ್ಪಳ :** ಮುಂಗಾರು ಹಂಗಾಮಿನ ಬಿತ್ತನೆಗೆ ರೈತರು ಸಿದ್ದತೆಗಳನ್ನು ಮಾಡಿಕೊಳ್ಳುತ್ತಿದ್ದು, ಈ ಸಂದರ್ಭದಲ್ಲಿ ಉತ್ತಮ ಇಳುವರಿಗಾಗಿ ಬೆಳೆಗಳಿಗೆ ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಸಂಯುಕ್ತ ರಸಗೊಬ್ಬರಗಳ ಬಳಕೆ ಮಾಡುವಂತೆ ಕೃಷಿ ಇಲಾಖೆಯಿಂದ ರೈತರಿಗೆ ಸಲಹೆಗಳನ್ನು ನೀಡಲಾಗಿದೆ.

ಸಸ್ಯಗಳ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಹದಿನೇಳು ಪೋಷಕಾಂಶಗಳ ಅಗತ್ಯವಿರುತ್ತದೆ. ಇವುಗಳಲ್ಲಿ ಇಂಗಾಲ, ಜಲಜನಕ ಮತ್ತು ಆಮ್ಲಜನಕವು ಸ್ವಾಭಾವಿಕವಾಗಿ ದೊರೆಯಲಿದ್ದು, ಗಾಳಿ ಮತ್ತು ನೀರಿನ ಮೂಲಕ ಸಸ್ಯಗಳಿಗೆ ಲಭ್ಯವಾಗುತ್ತವೆ. ಉಳಿದ ಹದಿನಾಲ್ಕು ಪೋಷಕಾಂಶಗಳಲ್ಲಿ ಸಾರಜನಕ, ರಂಜ-ಕ, ಪೊಟ್ಯಾಷ್ ಹೆಚ್ಚಿನ ಪ್ರಮಾಣದಲ್ಲಿ ಬೇಕಿದ್ದು, ಇವುಗಳನ್ನು ಪ್ರಧಾನ ಪೋಷಕಾಂಶಗಳೆಂದು, ಕಾಲ್ಸಿಯಂ, ಮೆಗ್ನೀಷಿಯಂ, ಗಂಧಕ, ಕಬ್ಬಿಣ, ಜಿಂಕ್, ಬೋರಾನ್, ತಾಮ್ರ, ಮ್ಯಾಂಗನೀಸ್, ಮಾಲಿಬ್ಡಿನಂ, ಕ್ಲೋರಿನ್ ಮತ್ತು ನಿಕಲ್ ಕಡಿಮೆ ಪ್ರಮಾಣದಲ್ಲಿ ಬೇಕಿದ್ದು ಇವುಗಳನ್ನು ಲಘು ಪೋಷಕಾಂಶಗಳೆಂದು ವಿಂಗಡಿಸಲಾಗಿದೆ. ಇವುಗಳಲ್ಲಿ ಯಾವುದೇ ಒಂದು ಪೋಷಕಾಂಶದ ಕೊರತೆಯಾದರೂ ಸಸ್ಯಗಳ ಬೆಳವಣಿಗೆ ಮತ್ತು ಅಭಿವೃದ್ಧಿಯ ಮೇಲೆ ಪರಿಣಾಮ ಬೀರಿ ಇಳುವರಿ ಕುಂಠಿತವಾಗುತ್ತದೆ.

ಪ್ರಧಾನ ಪೋಷಕಾಂಶಗಳು ಮತ್ತು ಲಘು ಪೋಷಕಾಂಶಗಳಿಗೆ ಭೂಮಿಯೇ ಮುಖ್ಯ ಅಧಾರ. ಮಣ್ಣಿನಿಂದ ಈ ಎಲ್ಲಾ ಪೋಷಕಾಂಶಗಳು ಬೆಳೆಗಳಿಗೆ ಬೇಕಾದ ಪ್ರಮಾಣದಲ್ಲಿ ದೊರೆಯುವುದಿಲ್ಲವಾದ್ದರಿಂದ ಬಾಹ್ಯವಾಗಿ ನೀಡುವುದು ಅನಿವಾರ್ಯ. ಬೆಳೆಗಳಿಗೆ ಬೇಕಾಗುವ ಈ ಬಾಹ್ಯ ಪೋಷಕಾಂಶಗಳನ್ನು ಸಾವಯವ (ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ, ಹಿಂಡಿ ಇತ್ಯಾದಿ) ಮತ್ತು ರಸಗೊಬ್ಬರಗಳಿಂದ ಒದಗಿಸಬೇಕಾಗಿದ್ದು, ರಸಗೊಬ್ಬರಗಳಲ್ಲಿ ಪೋಷಕಾಂಶಗಳು ಹೆಚ್ಚಿನ ಪ್ರಮಾಣದಲ್ಲಿ ಮತ್ತು ನೇರವಾಗಿ ದೊರೆಯುವ ರೂಪದಲ್ಲಿದ್ದು ಅವುಗಳ ಬಳಕೆ ಅತ್ಯಗತ್ಯವಾಗಿರುತ್ತದೆ.

ರೈತರು ಕೇವಲ ಒಂದು ಅಥವಾ ಎರಡು ಪೋಷಕಾಂಶ ಒದಗಿಸುವ ಯೂರಿಯಾ ಹಾಗೂ ಡಿ.ಎ.ಪಿ.ಯನ್ನು ರೂಢಿಗತವಾಗಿ ಬಳಸುತ್ತಿದ್ದು, ಇವುಗಳಲ್ಲಿ ಸಾರಜನಕ ಮತ್ತು ರಂಜಕದ ಅಂಶ ಮಾತ್ರವಿರುತ್ತದೆ. ಆದರೆ ಬೆಳೆಗಳಿಗೆ ಬರ ಮತ್ತು ರೋಗ ನಿರೋಧಕ ಶಕ್ತಿ ನೀಡಿ ಕಾಳಿನ ತೂಕ ಹೆಚ್ಚಿಸಲು ಅತ್ಯಂತ ಅವಶ್ಯಕವಾಗಿರುವ ಪೊಟ್ಯಾಷ್ ಲಭ್ಯವಿರುವುದಿಲ್ಲ. ಮಾರುಕಟ್ಟೆಯಲ್ಲಿ ವಿವಿಧ ಶ್ರೇಣಿಯ (ಗ್ರೇಡ್) ಸಾರಜನಕ, ರಂಜಕ ಮತ್ತು ಪೊಟ್ಯಾಪ್‌ಯುಕ್ತ ಬಹಳಷ್ಟು ರಸಗೊಬ್ಬರಗಳು ಲಭ್ಯವಿದ್ದು, ಶಿಫಾರಸ್ಸಿನಂತೆ ವಿವಿಧ ರಸಗೊಬ್ಬರಗಳ ಸಂಯೋಜನೆಯೊಂದಿಗೆ ಬಳಸಬಹುದಾಗಿದೆ. ಶಿಫಾರಸ್ಸಿನಂತೆ ಬೆಳೆಗಳಿಗೆ ಸಾರಜನಕ : ರಂಜ-ಕ : ಪೊಟ್ಯಾಷ್ ರಸಗೊಬ್ಬರಗಳನ್ನು 4 : 2 : 1 ರ ಅನುಪಾತದಲ್ಲಿ ಬಳಸಬೇಕಾಗಿರುತ್ತದೆ. ಆದರೆ ಇತ್ತೀಚಿನ ವರ್ಷಗಳಲ್ಲಿ ರೈತರು ಬಳಸುತ್ತಿರುವ ರಸಗೊಬ್ಬರಗಳ ಅನುಪಾತವು ರಾಜ್ಯದಲ್ಲಿ 5:3:1 ಆಗಿರುತ್ತದೆ. ಇದನ್ನು ಸಮತೋಲನಾತ್ಮಕ ರಸಗೊಬ್ಬರಗಳ ಬಳಕೆಯನ್ನು ಉತ್ತೇಜಿಸಲು ಪೊಟ್ಯಾಷ್‌ಯುಕ್ತ ಸಂಯುಕ್ತ ರಸಗೊಬ್ಬರಗಳ ಬಳಕೆಯನ್ನು ಪ್ರೇರೇಪಿಸುವುದು ಮುಖ್ಯವಾಗಿರುತ್ತದೆ.

ಅಲ್ಲದೆ, ರೈತರು ರಸಗೊಬ್ಬರವನ್ನು ಕೇವಲ ಒಂದೇ ಸಂಸ್ಥೆಯ ಅಥವಾ ಒಂದೇ ರಸಗೊಬ್ಬರಕ್ಕೆ ಆದ್ಯತೆ ನೀಡದೆ, ಡಿ.ಎ.ಪಿ ರಸಗೊಬ್ಬರಕ್ಕೆ ಪರ್ಯಾಯವಾಗಿ ಗಂಧಕ ಒದಗಿಸುವ 20:20:0:13 ಹಾಗೂ ಪೊಟ್ಯಾಷ್ ಒದಗಿಸುವ ಇತರೆ ಸಂಯುಕ್ತ ರಸಗೊಬ್ಬರಗಳಾದ 15:15:15, 10.26.26, 12:32:16, 22:22:11, 14:35:14, 17:17:17, 14:28:14, 19:19:19, 20:10:10 ಇತ್ಯಾದಿ ರಸಗೊಬ್ಬರಗಳನ್ನೂ ಸಹ ಬಳಸಬಹುದಾಗಿದೆ.

ಈ ಬಗ್ಗೆ ಇಲಾಖೆಯ ವಿವಿಧ ಹಂತಗಳಲ್ಲಿ ಜರುಗುವ ತರಬೇತಿಗಳು,

ಕಾರ್ಯಾಗಾರಗಳು ಹಾಗೂ ಅಭಿಯಾನಗಳಲ್ಲಿ ಕಡ್ಡಾಯವಾಗಿ ರೈತರಿಗೆ ಹಾಗೂ ರಸಗೊಬ್ಬರ ಮಾರಾಟಗಾರರಿಗೆ ಅರಿವು ಮೂಡಿಸಲಾಗುತ್ತದೆ. ಮಾರಾಟಗಾರರು ರಸಗೊಬ್ಬರಗಳನ್ನು ಮಾರಾಟ ಮಾಡುವಾಗ ಪೊಟ್ಯಾಷ್‌ಯುಕ್ತ ಸಂಯುಕ್ತ ರಸಗೊಬ್ಬರಗಳ ಉಪಯುಕ್ತತೆ ಬಗ್ಗೆ ರೈತರಿಗೆ ತಿಳಿಸಬೇಕು ಎಂದು ಕರ್ನಾಟಕ ರಾಜ್ಯ ಕೃಷಿ ಇಲಾಖೆಯ ಕೃಷಿ ಆಯುಕ್ತರು ಹಾಗೂ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರು ಜಂಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಂಗಳೂರು ಐಟಿಐ: ಪ್ರವೇಶಕ್ಕಾಗಿ ಅವಧಿ ವಿಸ್ತರಣೆ

**ಕೊಪ್ಪಳ :** ಮಂಗಳೂರಿನ ಸರಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಆಗಸ್ಟ್-2024 ನೇ ಸಾಲಿನ ಐಟಿಐ ಪ್ರವೇಶಕ್ಕಾಗಿ ಈ ಹಿಂದೆ ನಿಗದಿಪಡಿಸಿದ್ದ ಅಂತಿಮ ದಿನಾಂಕವನ್ನು ಜೂನ್ 09 ರವರೆಗೆ ವಿಸ್ತರಿಸಲಾಗಿದೆ.

ಸಂಸ್ಥೆಯಲ್ಲಿ ಎಲೆಕ್ಟ್ರಿಷಿಯನ್ ಮತ್ತು ಫಿಟ್ಟರ್ ಕೋರ್ಸ್‌ಗಳು ಅನುಷ್ಠಾನಗೊಂಡಿದ್ದು, ಪ್ರತಿ ಕೋರ್ಸಿನಲ್ಲಿ 16 ಸ್ಥಾನಗಳು ಲಭ್ಯವಿರುತ್ತವೆ. ಆಸಕ್ತ ಅಭ್ಯರ್ಥಿಗಳು ಆನ್‌ಲೈನ್ ಅರ್ಜಿಗಳನ್ನು ಖುದ್ದಾಗಿ ಅಥವಾ ಇಂಟರ್‌ನೆಟ್ ಸೆಂಟರ್‌ಗಳಲ್ಲಿ ಅಥವಾ ಸಂಸ್ಥೆಗೆ ಭೇಟಿ ನೀಡಿ www.cite.karnataka.gov.in ವೆಬ್‌ಸೈಟ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೇಯಲ್ಲಿ ಸಂಸ್ಥೆಗೆ ಭೇಟಿ ನೀಡಬಹುದು ಎಂದು ಸಂಸ್ಥೆಯ ಪ್ರಾಚಾರ್ಯರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಕರ್ನಾಟಕ ವಿಧಾನಪರಿಷತ್ ಈಶಾನ್ಯ ಪದವೀಧರರ ಮತಕ್ಷೇತ್ರದ ಚುನಾವಣೆ ಮತಗಟ್ಟೆಗೆ ಚುನಾವಣಾ ವೀಕ್ಷಕರ ಭೇಟಿ: ಮತದಾನ ಪ್ರಕ್ರಿಯೆ ವೀಕ್ಷಣೆ



**ಕೊಪ್ಪಳ :** ಕರ್ನಾಟಕ ವಿಧಾನಪರಿಷತ್ ಈಶಾನ್ಯ ಪದವೀಧರರ ಮತಕ್ಷೇತ್ರದ ಚುನಾವಣೆ ಪ್ರಯುಕ್ತ ಜೂನ್ 3ರಂದು ನಡೆದ ಮತದಾನದ ಹಿನ್ನೆಲೆಯಲ್ಲಿ ಕೊಪ್ಪಳ ನಗರದ ತಾಲ್ಲೂಕು ಪಂಚಾಯತ್ ಕಚೇರಿಯಲ್ಲಿನ ಮತಗಟ್ಟೆ ಸಂಖ್ಯೆ 128 ಹಾಗೂ 128ಎಗೆ ವಿಧಾನಪರಿಷತ್ ಈಶಾನ್ಯ ಪದವೀಧರರ ಮತಕ್ಷೇತ್ರದ ಚುನಾವಣಾ ವೀಕ್ಷಕರಾದ ಮಹೇಶ್ವರ ರಾವ್ ಅವರು ಸೋಮವಾರ ಭೇಟಿ ನೀಡಿ, ಮತದಾನ ಪ್ರಕ್ರಿಯೆಯನ್ನು ವೀಕ್ಷಣೆ ಮಾಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ರಾಹುಲ್ ರತ್ನಂ ಪಾಂಡೆಯ, ಕೊಪ್ಪಳ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಯಶೋಧಾ ವಂಟಗೋಡಿ, ಅಪರ ಜಿಲ್ಲಾಧಿಕಾರಿಗಳಾದ ಸಾವಿತ್ರಿ ಬಿ ಕಡಿ, ಕೊಪ್ಪಳ ಉಪವಿಭಾಗಾಧಿಕಾರಿಗಳಾದ ಕ್ಯಾಪ್ಟನ್ ಮಹೇಶ್ ಮಾಲಗಿತ್ತಿ, ಹೊಸಪೇಟೆ ಉಪವಿಭಾಗಾಧಿಕಾರಿಗಳಾದ ಮಹದ್‌ಅಲಿ ಅಕ್ರಮ್ ಷಾಹ, ಕೊಪ್ಪಳ ತಹಶೀಲ್ದಾರ ವಿಠ್ಠಲ್ ಚೌಗಲಾ, ತಾಪಂ ಇಓ ದುಂಡಪ್ಪ ತುರಾದಿ, ಜಿಲ್ಲಾ ತರಬೇತಿ ಸಂಸ್ಥೆಯ ಪ್ರಾಚಾರ್ಯರಾದ ಕೃಷ್ಣಮೂರ್ತಿ ದೇಸಾಯಿ ಸೇರಿದಂತೆ ಮತ್ತಿತರರಿದ್ದರು.

# ಅರ್ಜಿ ಆಹ್ವಾನ

**ಬೆಳಗಾವಿ :** ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಪ್ರತಿಭಾವಂತ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸುವ ಸಲುವಾಗಿ ಮಾಧ್ಯಮಿಕ/ಪ್ರೌಢಶಾಲಾ ವಿದ್ಯಾರ್ಥಿ ಕ್ರೀಡಾಪಟುಗಳಿಗೆ ವಾರ್ಷಿಕ ರೂ.10,000 ಕ್ರೀಡಾ ವಿದ್ಯಾರ್ಥಿವೇತನ ನೀಡಲು ಆನ್‌ಲೈನ್ ಮೂಲಕ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರೀಡಾಪಟುಗಳು 2023-24 ನೇ ಸಾಲಿನಲ್ಲಿ ವಿದ್ಯಾರ್ಥಿಯಾಗಿದ್ದು, ಮಾಧ್ಯಮಿಕ/ಪ್ರೌಢಶಾಲೆಯಲ್ಲಿ (6 ರಿಂದ 10ನೇ ತರಗತಿ) ಓದುತ್ತಿರಬೇಕು. ರಾಜ್ಯ ಕ್ರೀಡಾ ಪ್ರಾಧಿಕಾರದಲ್ಲಿ ನೊಂದಾಯಿತವಾದ ಕ್ರೀಡಾ ಸಂಸ್ಥೆಗಳು ನಡೆಸಿದ ರಾಜ್ಯ ಮಟ್ಟದ ಸ್ಪರ್ಧೆಗಳಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದಿರಬೇಕು. ಭಾರತ ಸರ್ಕಾರದಿಂದ ಮಾನ್ಯತೆ ಪಡೆದ ಅಧಿಕೃತ ಕ್ರೀಡಾ ಸಂಸ್ಥೆಗಳು ಆಯೋಜಿಸುವ ರಾಷ್ಟ್ರ ಮಟ್ಟದ ಕ್ರೀಡಾಕೂಟಗಳಲ್ಲಿ ಭಾಗವಹಿಸಿರಬೇಕು.

ರಾಷ್ಟ್ರೀಯ ಖೇಲೋ ಇಂಡಿಯಾ ಕ್ರೀಡಾಕೂಟದಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಿರಬೇಕು. ಒಬ್ಬ ಕ್ರೀಡಾಪಟು ಒಂದಕ್ಕಿಂತ ಹೆಚ್ಚು ಕ್ರೀಡೆಗಳಲ್ಲಿ ಭಾಗವಹಿಸಿದ್ದರು ಸಹ ವಾರ್ಷಿಕ ಒಂದೇ ವಿದ್ಯಾರ್ಥಿವೇತನದ ಮೊತ್ತಕ್ಕೆ ಅರ್ಹರಿರುತ್ತಾರೆ.

ಸದರಿ ಅರ್ಹ ಕ್ರೀಡಾಪಟುಗಳು ಕಚೇರಿಯ ಅಧೀಕೃತ ಜಾಲತಾಣ https://sevasindhuservices.karnataka.gov.in ಮೂಲಕ ಆನ್‌ಲೈನ್ ಜೂ.30 ರೊಳಗಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ.

# ಅಭೂತಪೂರ್ವ ಜಯ, ಬೆಳಗಾವಿ ಜನರಿಗೆ ಚಿರಋಣಿ ಆಗಿರುತ್ತೇನೆ': ಜಗದೀಶ್ ಶೆಟ್ಟರ್

**ಬೆಳಗಾವಿ :** ಬೆಳಗಾವಿ ಬಿಜೆಪಿ ಭದ್ರಕೋಟೆಎಂಬುದುಮತ್ತೊಮ್ಮೆ ಸಾಬೀತಾಗಿದೆ. ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳ್ಕರ್ ಮನೆ ಮಗ, ಜಗದೀಶ್ ಹೊರ ಜಿಲ್ಲೆಯವರು ಎಂಬ ಮಾತಿಗೆ ಮತದಾರರು ಮನ್ನಣೆ ನೀಡಿಲ್ಲ. ಈ ಗೆಲುವಿನ ಕುರಿತು ಬೆಳಗಾವಿ ಲೋಕಸಭಾ ಕ್ಷೇತ್ರದ ಬಿಜೆಪಿಯ ವಿಜೇತ ಅಭ್ಯರ್ಥಿ ಜಗದೀಶ್ ಶೆಟ್ಟರ್ ಈಟಿವಿ ಭಾರತನೊಂದಿಗೆ ಮಾತನಾಡಿದ್ದಾರೆ. ಇದು ಅಭೂತಪೂರ್ವ, ಇತಿಹಾಸ ನಿರ್ಮಾಣ ಮಾಡುವ ಜಯ. ಬೆಳಗಾವಿ ಜನತೆಗೆ ನಾನು ಧನ್ಯವಾದ ಸಲ್ಲಿಸುತ್ತೇನೆ ಎಂದರು. ಜನರು ಬಹಳ ಪ್ರೀತಿ, ವಿಶ್ವಾಸ, ಆತ್ಮೀಯವಾಗಿನನಗೆಆಶೀರ್ವಾದ ಮಾಡಿದ್ದಾರೆ. ಅವರಿಗೆ ನಾನು ಚಿರಋಣಿ ಆಗಿರುತ್ತೇನೆ. ಜಿಲ್ಲೆಯ ಶಾಸಕರು, ಮಾಜಿ ಶಾಸಕರು, ಪಕ್ಷದ ಎಲ್ಲಾ ಧುರೀಣರು,




ಎಲ್ಲಾ ತಾಲೂಕುಗಳ ಅಧ್ಯಕ್ಷರು, ಕಾರ್ಯಕರ್ತರು, ಗಟ್ಟಿಯಾಗಿ ನಿಂತು ಬೆಂಬಲಿಸಿದ್ದರಿಂದ ನಾನು ಗೆಲ್ಲಲು ಸಾಧ್ಯವಾಗಿದೆ ಎಂದು ತಿಳಿಸಿದರು.

ವಿರೋಧಿಗಳು ನನ್ನ ವಿರುದ್ಧ ಟೀಕೆ, ಟಿಪ್ಪಣಿ ಮಾಡಿದಾಗ ಅವರಷ್ಟು ಕೆಳಹಂತಕ್ಕೆ ಹೋಗಿ ಟೀಕೆ ಮಾಡಲು ಹೋಗುವುದಿಲ್ಲ ಎಂದು ಹೇಳಿದ್ದೆ. ಮತದಾನದ ದಿನ, ಏಳರಂದು ಜನ ಉತ್ತರ ಕೊಡುತ್ತಾರೆ ಎಂದು ತಿಳಿಸಿದ್ದೆ. ಎಲ್ಲದಕ್ಕೂ ಜನರಿಂದು ತಕ್ಕ ಉತ್ತರ ಕೊಟ್ಟಿದ್ದಾರೆ ಎಂದು ತಿರುಗೇಟು ಕೊಟ್ಟರು.

ಈ ಹಿಂದೆ ಶೆಟ್ಟರ್‌ಗೆ ನಿಮ್ಮ ಅಡ್ರೆಸ್ ಎಲ್ಲಿದೆ? ಎಂಬ ಪ್ರಶ್ನೆ ಎದುರಾಗಿ-ತ್ತು. ಈ ವಿಚಾರಕ್ಕೆ ಪ್ರತಿಕ್ರಿಯಿಸಿದ ಅವರು, ಅಡ್ರೆಸ್ ಎಲ್ಲಿ? ಏನು? ಎಂಬುದನ್ನು ಈಗಾಗಲೇ ಜನ ಹೇಳಿ ಬಿಟ್ಟಿದ್ದಾರೆ. ಬೆಳಗಾವಿಯಲ್ಲಿನಾನುಗಟ್ಟಿಯಾಗಿ ಇರಬೇಕೆಂದು 1 ಲಕ್ಷ 75 ಸಾವಿರ ಮತಗಳ ಅಂತರದಿಂದ ಗೆಲ್ಲಿಸಿದ್ದಾರೆ.

ಈ ಮೂಲಕ ಬೆಳಗಾವಿಯಲ್ಲಿ ಶೆಟ್ಟರ್ ಗಟ್ಟಿಯಾಗಿ ಇರುತ್ತಾರೆ-ಂದು ಜನರೇ ತೋರಿಸಿಕೊಟ್ಟಿದ್ದಾರೆ ಎಂದು ಹೇಳಿದರು.

ಕ್ಷೇತ್ರದ ಅಭಿವೃದ್ಧಿಗೆ ಎಲ್ಲಾ ರೀತಿಯಿಂದ ಒತ್ತು ಕೊಟ್ಟು ಕೆಲಸ ಮಾಡುತ್ತೇನೆ. ಅದರಲ್ಲಿ ಯಾವುದೇ ಪ್ರಶ್ನೆ ಇಲ್ಲ. ಬೆಳಗಾವಿಯನ್ನು ಮಾದರಿ ಲೋಕಸಭಾ ಕ್ಷೇತ್ರ ಮಾಡುತ್ತೇನೆ ಎಂದು ಶೆಟ್ಟರ್ ಭರವಸೆ ನೀಡಿ-ದರು. ಜೊತೆಗೆ ಕ್ಷೇತ್ರದ ಜನರಿಗೆ ನಾನು ಚಿರಋಣಿಯಾಗಿದ್ದೇನೆ. ನಿಮ್ಮ ಪ್ರೀತಿ, ವಿಶ್ವಾಸವನ್ನು ನನ್ನ ಜೀವನದಲ್ಲಿ ಎಂದಿಗೂ ಮರೆಯಲು ಸಾಧ್ಯವಿಲ್ಲ.

ನಿಮ್ಮ ಆಶಯದಂತೆ ಈ ಕ್ಷೇತ್ರವನ್ನು ಮಾದರಿ ಕ್ಷೇತ್ರ ಮಾಡಲು ಬದ್ಧನಿದ್ದೇನೆ ಎಂದು ಭರವಸೆ ನೀಡಿದರು.

ಜೊತೆಗೆ, ಕೇಂದ್ರದಲ್ಲಿ ಮಂತ್ರಿಯಾಗುವ ವಿಚಾರ-ಕ್ಕೆ ಪ್ರತಿಕ್ರಿಯಿಸಿ, ಪಕ್ಷ ಯಾವ ಸಂದರ್ಭದಲ್ಲಿ ಏನೇನು ಜವಾಬ್ದಾರಿ ಕೊಟ್ಟಿದೆಯೋ ಅದನ್ನು ಮಾಡಿದ್ದೇನೆ ಎಂದು ತಿಳಿಸಿದರು.

# ದೇವರು, ಧರ್ಮ ಮತ್ತು ಗುರುವನ್ನು ಮರೆಯದಿರಿ: ಕಾಶೀ ಜಗದ್ಗುರುಗಳು



**ಕಲಬುರಗಿ :** ಸುಖ, ಶಾಂತಿ ನೆಮ್ಮದಿಯ ಬದುಕಿಗೆ ದೇವರು ಧರ್ಮ ಮತ್ತು ಗುರುವನ್ನು ಮರೆಯದೇ ಬಾಳಬೇಕೆಂದು ಶ್ರೀ ಕಾಶೀ ಜ?ಞಾನ ಸಿಂಹಾಸನಾಧೀಶ್ವರ ಜಗದ್ಗುರು ಡಾ. ಮಲ್ಲಿಕಾರ್ಜುನ ವಿಶ್ವಾರಾಧ್ಯ ಶಿವಾಚಾರ್ಯ ಭಗವತ್ಪಾದರು ಅಭಿಪ್ರಾಯ ಪಟ್ಟರು.

ಅವರು ಕಲಬುರಗಿ ತಾಲೂಕಿನ ಪಾಳಾ ಗ್ರಾಮದ ಕಟ್ಟಿ ಹಿರೇಮಠದ ಲಿಂಗೈಕ್ಯ ಮಳೇಂದ್ರ ಶಿವಾಚಾರ್ಯರ ಪುಣ್ಯಾರಾಧನೆಯ ಧರ್ಮ ಸಭೆಯಲ್ಲಿ ಸಾನಿಧ್ಯವಹಿಸಿ ಆಶೀರ್ವಚನ ನೀಡುತ್ತಿದ್ದರು ದೇವನೊಬ್ಬ ನಾಮ ಹಲವು ಯಾವ ಹೆಸರಿನಿಂದ ಕರೆದರೂ ಓಗೊಡುವ ಪರಮಾತ್ಮಾ ಒಬ್ಬನೇ ಎಂಬ ಅರಿವು ಮುಡಿದಾಗ ಸಮಾಜದಲ್ಲಿ ಸಾಮರಸ್ಯ ಬೆಳೆಯಲು ಸಾಧ್ಯವಾಗುತ್ತದೆ. ನುಡಿದಂತೆ ನಡೆಯುವದೇ ನಿಜವಾದ ಧರ್ಮ ಆಡುಮಾತು, ನಡೆಯುವ ದಾರಿ ಇನ್ನೊಂದಾದರೆ ಮನುಷ್ಯನಿಗೆ ಬೆಲೆ ಸಿಗುವುದಿಲ್ಲ. ಬ್ರಹ್ಮ, ವಿಷ್ಣು, ಮಹೇಶ್ವರರ ತತ್ವವನ್ನು ಅರಿಯಲು ಗುರುಬೇಕು. ಅನ್ನ, ನೀರು, ಗಾಳಿ ಕೊಟ್ಟ ದೇವರನ್ನು ಮರೆಯಬಾರದೆಂದು ನುಡಿದರು. ಶಖಾಪುರದ ತಪೋವನ ಮಠದ ಡಾ. ಸಿದ್ಧರಾಮ ಶಿವಾಚಾರ್ಯರು ಆಶೀರ್ವಚನದಲ್ಲಿ ಗುರುವಿಲ್ಲದ, ಗುರಿ ಇಲ್ಲದ ಜೀವನ ವ್ಯರ್ಥ, ಸಮಾಜದಲ್ಲಿ ಒರೆ ಕೊರೆಗಳನ್ನು ತಿದ್ದಿ ತೀಡುವುದೇ ಗುರುವಿನ ಧರ್ಮ, ತನ್ನಲ್ಲಿರುವ ಪ್ರತಿಭೆಯ ಶಕ್ತಿಯನ್ನು ಅರಿಯಲು ಗುರು ಮುಖ್ಯವೆಂದು ನುಡಿದರು. ಪಾಳಾದ ಶ್ರೀ ಮಠದ ಒಡೆಯರಾದ ಡಾ. ಗುರುಮೂರ್ತಿ ಶಿವಾಚಾರ್ಯರು ನೇತೃತ್ವ ವಹಿಸಿದರು. ನಾಗಣಸೂರ, ಮೈಂದರ್ಗಿ, ಶಹಾಪೂರ ಕುಂಬಾರಗೇರಿ, ಅಂಬೇಜೋಗಾಯಿ ಶ್ರೀಗಳು, ಮಾಲಗತ್ತಿಯ ಚೆನ್ನಯ್ಯಅಪ್ಪಾಗೋಳ ಇದ್ದರು. ಕರಬಸಯ್ಯ ಹಿರೇಮಠ, ಬಸವರಾಜ ಪಾಟೀಲ, ಸುಭಾಷ ಸಾಹು, ಬಾಪುಗೌಡ ಪಾಟೀಲ, ಸಂಗಪ್ಪ ಪಾಟೀಲ, ಶಾಂತಕುಮಾರ ಬನ್ನೂರ, ಶರಣಗೌಡ ಪಾಟೀಲ, ಬಸವರಾಜ ಶೀಲವಂತ ಅಂಬಲಗಿ, ಪಾಳಾ ಗ್ರಾಮದ ಗಣ್ಯರು ಇದ್ದರು. ಕಾಶೀ ಜಗದ್ಗುರುಗಳ ಅಡ್ಡ ಪಲ್ಲಕ್ಕಿಯ ಮೆರವಣಿಗೆಯಲ್ಲಿ ಕುಂಬ, ಕಳಸ ಹೊತ್ತ ಸುಮಂಗಲಿಯರು ಬಾಜಾ ಭಜಂತ್ರಿಯೊಂದಿಗೆ ಗ್ರಾಮದ ಪ್ರಮುಖ ಬೀದಿಯಿಂದ ಸಾಗಿ ಬಂದು ಶ್ರೀಮಠಕ್ಕೆ ಬರಮಾಡಿಕೊಳ್ಳಲಾಯಿತು. ನಂತರ ಪ್ರಸಾದ ವಿತರಿಸಲಾಯಿತು, ಜೇರಟಗಿಯ ಮಡಿವಾಳಯ್ಯಶಾಸ್ತ್ರಿ ಸರ್ವರನ್ನು ಸ್ವಾಗತಿಸಿದರು, ಯಶ್ವಂತ ಬಡಿಗೇರ ಹಾಗೂ ರಾಜೂ ಕಟ್ಟಿಸಂಗಾವಿ ಇವರಿಂದ ಸಂಗೀತ ಜರುಗಿತು. ಸಂತೋಷ ಪಾಳಾ ನಿರೂಪಿಸಿದರು.

# ವಿಶ್ವ ತಂಬಾಕು ವಿರೋಧಿ ದಿನ ಆಚರಣೆ



**ಮೂಡಲಗಿ :** ತಂಬಾಕು ಮನುಷ್ಯನನ್ನು ದಿನದಿಂದ ದಿನ ನಿಧಾನವಾಗಿ ಕೊಲ್ಲುತ್ತದೇ, ಕ್ಯಾನ್ಸರ್, ಟಿ.ಬಿ.ಯಂತಹ ಗಂಭೀರ ಖಾಯಿಲೆಗಳು ಈ ತಂಬಾಕಿನಿಂದ ಉಂಟಾಗುತ್ತದೆ ಎಂದು ತಾಲೂಕಿನ ಯೋಜನಾಧಿಕಾರಿ ರಾಜು ನಾಯಕ್ ಹೇಳಿದರು.

ಮಂಗಳವಾರ ಶಿವಬೋಧರಂಗ ಪ್ರೌಢ ಶಾಲೆಯಲ್ಲಿ ಧರ್ಮಸ್ಥಳ ಗ್ರಾಮಿಣಾಭಿವೃದ್ಧಿ ಯೋಜನೆಯಿಂದ ಹಮ್ಮಿಕೊಂಡ ವಿಶ್ವ ತಂಬಾಕು ವಿರೋಧಿ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದರು,

ಕಾರ್ಯಕ್ರಮವನ್ನು ಮೂಡಲಗಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ವೆಂಕಟೇಶ ಸೋನವಾಲ್ಕರ ಗಿಡಕ್ಕೆ ನೀರುಣಿಸುವುದರ ಮೂಲಕ ಕಾರ್ಯಕ್ರಮ ಚಾಲನೆ ನೀಡಿದರು. ಆರೋಗ್ಯ ಶಿಕ್ಷಣಾಧಿಕಾರಿ ಈಶ್ವರಪ್ಪ ಮಾತನಾಡಿ, ತಂಬಾಕು ವಿರೋಧಿ ದಿನಾಚರಣೆಯ ಆರಂಭ, ಮಾದಕ ವಸ್ತುಗಳ ವ್ಯಸನಿ ಆಗಿರುವುದರ ದುಷ್ಪರಿಣಾಮಗಳು, ದುಶ್ಚಟಗಳಿಂದ ಹೇಗೆ ದೂರವಿರಬೇಕು ಎಂಬುದರ ಬಗ್ಗೆ ಮಾಹಿತಿಯನ್ನು ನೀಡಿದರು. ಸದರಿ ಕಾರ್ಯಕ್ರಮದಲ್ಲಿ ಪ್ರೌಢಶಾಲೆ ಉಪ ಪ್ರಾಚಾರ್ಯ ಬಿ ಕೆ ಕಾಡಪಗೋಳ ಮತ್ತು ಶಿಕ್ಷಕ ವೃಂದದವರು, ಜ್ಞಾನವಿಕಾಸ ಸಮನ್ವಯಾಧಿಕಾರಿ ವಿಜಯಲಕ್ಷ್ಮಿ ಹಾಗೂ ಪ್ರೌಢ ಶಾಲೆಯ 60 ಮಂದಿ ವಿದ್ಯಾರ್ಥಿಗಳು ಮಾಹಿತಿ ಕಾರ್ಯಗಾರದಲ್ಲಿ ಭಾಗವಹಿಸಿರುತ್ತಾರೆ.

# ಕೃಷಿ ಪರಿಕರಗಳ ಮಾರಾಟ ಮಳಿಗೆಗಳಿಗೆ ಅನಿರೀಕ್ಷಿತ ಭೇಟಿ ನೀಡಿ ರಸಗೊಬ್ಬರ ಬಿತ್ತನೆ ಬೀಜದ ದಾಸ್ತಾನುಗಳ ಪರಿಶೀಲನೆ

**ಕಲಬುರಗಿ :** ಜಿಲ್ಲೆಯಲ್ಲಿ 2024ರ ಮುಂಗಾರು ಹಂಗಾಮು ಬಿತ್ತನೆ ಪ್ರಾರಂಭವಾಗಿದ್ದು, ರೈತರು ಕೃಷಿ ಪರಿಕರಗಳ ಮಾರಾಟ ಮಳಿಗೆಗಳಿಂದ ಕೃಷಿ ಪರಿಕರಗಳನ್ನು ಖರೀದಿಸುತ್ತಿರುವ ಹಿನ್ನಲೆಯಲ್ಲಿ ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕರಾದ ಸಮದ್ ಪಟೇಲ್ ಮತ್ತು ಸಹಾಯಕ ಕೃಷಿ ನಿರ್ದೇಶಕರು (ಜಾರಿದಳ) ಸತೀಶ ಕುಮಾರ ಮತ್ತು ಚಂದ್ರಕಾಂತ ಜೀವಣಗಿ ಅವರು ಬುಧವಾರ ಕಲಬುರಗಿ ನಗರದ ವಿವಿಧ ಕೃಷಿ ಪರಿಕರಗಳ ಮಾರಾಟ ಮಳಿಗೆಗಳಿಗೆ ಅನೀರಿಕ್ಷಿತ ಭೇಟಿ ನೀಡಿ ರಸಗೊಬ್ಬರ ಬಿತ್ತನೆ ಬೀಜದ ದಾಸ್ತಾನುಗಳನ್ನು ಪರಿಶೀಲಿಸಿ ಹಾಗೂ ಮಾರಾಟದ ಬಿಲ್ ಪುಸ್ತಕಗಳನ್ನು ಪರಿಶೀಲಿಸಿದರು.

ಈ ಸಂದರ್ಭದಲ್ಲಿ ಕಲಬುರಗಿಯ ಲಕ್ಷ್ಮೀ ಆಗ್ರೋ ಸಪ್ಲಾಯರ್ಸ್ (Laxmi Agro Suppliers) ಮಾರಾಟ ಮಳಿಗೆಯಲ್ಲಿ ಯುಎಸ್ ಅಗ್ರಿ ಸೀಡ್ಸ್ (US Agri Seeds) ಹತ್ತಿ ಬೀಜವಾದ, ಯುಸ್-4708 ಮತ್ತು ಯುಎಸ್-7067 ಬೀಜಗಳನ್ನು ಎಮ್.ಆರ್.ಪಿ. (MRP) ದರಕ್ಕಿಂತ ಹೆಚ್ಚಿನ ಬೆಲೆಯಲ್ಲಿ ಮಾರಾಟ ಮಾಡುತ್ತಿರುವುದು ಕಂಡು ಬಂದಿರುವ ಹಿನ್ನೆಲೆಯಲ್ಲಿ ಸದರಿ ಕಂಪನಿಯ ಬೀಜ ಮಾರಾಟ ಸ್ಥಗಿತಗೊಳಿಸಲು ಆದೇಶಿಸಿರುತ್ತಾರೆ. ಮಾರಾಟ ಮಳಿಗೆಯ ಮಾಲೀಕರಿಗೆ ದರಕ್ಕಿಂತ ಹೆಚ್ಚಿನ ದರದಲ್ಲಿ ಕೃಷಿ ಪರಿಕರಗಳನ್ನು ಮಾರಾಟ ಮಾಡದಿರಲು ಕಟ್ಟು ನಿಟ್ಟಾಗಿ ನಿರ್ದೇಶನ ನೀಡಿದರು.

ಹೆಚ್ಚಿನ ದರದಲ್ಲಿ ಮಾರಾಟ ಮಾಡುವುದು ಕಂಡು ಬಂದಲ್ಲಿ ಅಂತವರ ಪರವಾನಿಗೆ ಪತ್ರ ರದ್ದುಗೊಳಿಸಲಾಗುತ್ತದೆ ಮತ್ತು ಕಾನೂನಾತ್ಮಕ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದ್ದಾರೆ. ಅಲ್ಲದೆ ರಸಗೊಬ್ಬರ ಮಾರಾಟವನ್ನು (P.O.S) ಮುಖಾಂತರವೇ ಮಾರಾಟ ಮಾಡಲು ಎಚ್ಚರಿಕೆ ನೀಡಲಾಗಿದೆ.

ನಿಗದಿತ ದರಕ್ಕಿಂತ ಹೆಚ್ಚಿನ ದರದಲ್ಲಿ ಕೃಷಿ ಪರಿಕರಗಳನ್ನು ಮಾರಾಟ ಕಂಡು ಬಂದಲ್ಲಿ ರೈತ ಬಾಂಧವರು

ಜಂಟಿ ಕೃಷಿ ನಿರ್ದೇಶಕರ ಕಚೇರಿ/ಸಹಾಯಕ ಕೃಷಿ ನಿರ್ದೇಶಕರ ಕಛೇರಿಗೆ ಮಾಹಿತಿ ನೀಡಬೇಕೆಂದು ಕಲಬುರಗಿ ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

# 15 ನೇ ದಿನ ಪೂರೈಸಿದ ಅಂಬೇಡ್ಕರ ಭವನ ಧರಣಿ ಸತ್ಯಾಗ್ರಹ ಅಂಬೇಡ್ಕರ್ ಭವನ ಸಮಸ್ಯೆ ಬಗೆ ಹರಿಸಲು ವಿಜಯಪುರ ಜಿಲ್ಲಾಡಳಿತದಿಂದ ದಿವ್ಯ ನಿರ್ಲಕ್ಷ್ಯ: ಪರಶುರಾಮ ಸಿದರಡ್ಡಿ




**ವಿಜಯಪುರ :** ನಗರದ ಮನಗೂಳಿ ಅಗಸಿ ಹತ್ತಿರದ ಡಾ. ಬಿ.ಆರ್. ಅಂಬೇಡ್ಕರ ಸಮುದಾಯ ಭವನ ನಿರ್ಮಾಣಕ್ಕೆ ಸಂಬಂಧಿಸಿದಂತೆ ಜಿಲ್ಲಾಧಿಕಾರಿಗಳ ಕಚೇರಿ ಮುಂದೆ ಡಾ ಬಿ ಆರ್ ಅಂಬೇಡ್ಕರ್ ಯುವಕ ಸಂಘದಿಂದ ಹಮ್ಮಿಕೊಂಡಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹ ಮಂಗಳವಾರ 15ನೇ ದಿನ ಪೂರೈಸಿದೆ.

ಈ ಸಂದರ್ಭದಲ್ಲಿ ದಲಿತ ಮುಖಂಡ ಪರಶುರಾಮ ಸಿದರಡ್ಡಿ ಅವರು ಮಾತನಾಡಿ, ಕಳೆದ 15 ದಿನಗಳಿಂದ ವಿಜಯಪುರ ಜಿಲ್ಲಾಧಿಕಾರಿ ಕಛೇರಿ ಮುಂದೆ ಇಡೀ ಬಡಾವಣೆಯ ದಲಿತ ಸಮುದಾಯ ಬೀದಿಯಲ್ಲಿ ನಿಂತು ನ್ಯಾಯಕ್ಕಾಗಿ ಅಂಗಲಾಚ್ಚುತ್ತಿದ್ದರು ಕೂಡ ಜಿಲ್ಲಾಡಳಿತ ಅಂಬೇಡ್ಕರ್ ಭವನ ಜಾಗದ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸದೇ ದಿವ್ಯ ನಿರ್ಲಕ್ಯ ತೋರುತ್ತಿರುವುದು ಖಂಡನೀಯವಾದುದು ಕೂಡಲೇ ಜಿಲ್ಲಾಧಿಕಾರಿಗಳು ಜಾಗವನ್ನು ಮಂಜೂರು ಮಾಡಿ ಆದೇಶ ಪತ್ರ ನೀಡುವ ಮೂಲಕ ನೊಂದ ದಲಿತ ಸಮುದಾಯಕ್ಕೆ ನ್ಯಾಯ ಒದಗಿಸಬೇಕೆಂದು ಆಗ್ರಹಿಸಿದರು.

ಈ ಸಂದರ್ಭದಲ್ಲಿ ಸಂಘಟನೆಯ ಅಧ್ಯಕ್ಷ ಶ್ರೀಶೈಲ ಕಾಖಂಡಕಿ, ರವಿ ಕಾಖಂಡಕಿ, ಬಾಬು ಶಿವಶರಣ, ರಾಜು ಕಾಖಂಡಕಿ, ಪ್ರದೀಪ ಚಲವಾದಿ, ಬಸವರಾಜ ಕುಬಕಡ್ಡಿ, ಶೇಖು ಕೂಡಗಿ, ಸುನೀಲ ಕಾಖಂಡಕಿ, ಕೃಷ್ಣಾ ಚಲವಾದಿ,

ಆಕಾಶ ಕಾಂಬಳೆ, ಸಚಿನ ಕಾಖಂಡಕಿ, ಪ್ರತಾಪ ಚಿಕ್ಕಲಕಿ, ಆಕಾಶ ಕಾಖಂಡಕಿ, ರೋಹಿತ ಮಲಕಣ್ಣವರ, ಸನ್ನಿ ಕಾಖಂಡಕಿ, ಪ್ರೀತಂ ಕಾ-ಖಂಡಕಿ, ರಾಜರತನ ಕಾಂಬಳೆ, ಮುದುಕು ವಾಲಿಕಾರ ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಪರಿಸರ ದಿನಾಚರಣೆ ದಿನನಿತ್ಯದ ಕಾಯಕವಾಗಬೇಕು



**ರಬಕವಿ-ಬನಹಟ್ಟಿ :** ಪರಿಸರ ದಿನಾಚರಣೆ ಒಂದೇ ದಿನದ ಕಾರ್ಯಕ್ರಮವಾಗದೆ ಇದು ದಿನ ನಿತ್ಯದ ಕಾರ್ಯವಾಗಬೇಕು. ಪರಿಸರ ರಕ್ಷಣೆಯ ಕರ್ತವ್ಯ ಮಹತ್ವವಾದದ್ದು. ನೆಟ್ಟ ಸಸಿಗಳನ್ನು ಮೂರು ವರ್ಷಗಳಾದರೂ ರಕ್ಷಣೆಯನ್ನು ಮಾಡಬೇಕು ಎಂದು ಜಮಖಂಡಿಯ ಶಿಕ್ಷಣ ಸಂಯೋಜಕರಾದ ಎಸ್. ಬಿ. ಬುರ್ಲಿ ತಿಳಿಸಿದರು.

ಬುಧವಾರ ಬನಹಟ್ಟಿಯ ಸರಕಾರಿ ಪದವಿ ಪೂರ್ವ ಕಾಲೇಜಿನ ಪ್ರೌಢಶಾಲೆಯಲ್ಲಿ ಹಮ್ಮಿಕೊಂಡ ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಸಸಿ ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪರಿಸರ ನಾಶದಿಂದಾಗಿ ಭೂಮಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿದೆ. ವಿದ್ಯಾರ್ಥಿಗಳು ತಾವು ನೆಟ್ಟ ಸಸಿಗಳ ರಕ್ಷಣೆಗೆ ಮುಂದಾಗಬೇಕು.

ಗಿಡ ಮರಗಳ ಬಗ್ಗೆ ದಿನನಿತ್ಯ ಕಾಳಜಿಯನ್ನು ತೆಗೆದುಕೊಳ್ಳಬೇಕು. ಪರಿಸರವನ್ನು ಉಳಿಸಿ ಬೆಳೆಸುವ ನಿಟ್ಟಿನಲ್ಲಿ ಪ್ರತಿಯೊಬ್ಬ ವಿದ್ಯಾರ್ಥಿಯ ಜವಾಬ್ದಾರಿಗಳು ಅತ್ಯಂತ ಮುಖ್ಯವಾಗಿದೆ ಎಂದು ತಿಳಿಸಿದರು.

ಮುಖೋಪಾಧ್ಯಾಯರಾದ ಎಂ. ಎಂ. ನಾಯಕವಾಡಿ, ರವಿ ಬಸಗೊಂಡನವರ, ಮುಕ್ತಾಬಾಯಿ ಸುರೇಶ, ಬಿ. ಜಿ. ಬಂಗೇರ, ಎಸ್. ಎಂ. ಯಂಡಿಗೇರಿ, ರಾಜು ಚನಾಳ, ಬಿ. ಡಿ. ಖವಾಸಿ, ಎ. ಎಸ್. ಕದಮ್, ಬಿ. ಎಸ್. ಗಾಣಗೇರ, ಮಹಾನಂದಾ ಹುನ್ನೂರ, ಸುರೇಶ ಗಡಾಲೋಟಿ, ಎಂ. ಸಿ. ಮಹಾಬಳಶೆಟ್ಟಿ, ಎಸ್. ಎಂ. ಹುಚ್ಚಗೌಡರ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

# ನಗರ ಕಾಂಗ್ರೆಸ್ ಅಧ್ಯಕ್ಷರ ವಾರ್ಡಿನಲ್ಲಿ ಕಾಂಗ್ರೆಸ್ ಹಿನ್ನಡೆ



**ಕೊಪ್ಪಳ :** ನಗರ ಕಾಂಗ್ರೆಸ್ ಅಧ್ಯಕ್ಷರಾದ ಎಂ ಪಾಷ ಕಾಟನ್ ರವರ ನಿವಾಸ ಇರುವ ವಾರ್ಡ್ ನಂ6 ರಲ್ಲಿಲೋಕಸಭಾ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿ ಕೆ ರಾಜಶೇಖರ್ ಹಿಟ್ನಾಳ್ ರವರಿಗೆ ವಾರ್ಡಿನ ಎರಡು ಬೂತ್ ನಲ್ಲಿ ಕಡಿಮೆ ಮತ ಲಭಿಸಿದೆ ಇಲ್ಲಿ ಬಿಜೆಪಿ ಅಭ್ಯರ್ಥಿಗೆ ಹೆಚ್ಚು ಮತ ಸಿಕ್ಕಿದೆ.

ಕೊಪ್ಪಳ ನಗರಸಭೆಯ 6ನೇ ವಾರ್ಡಿನ ಮಿಟ್ಟಿಕೇರಿ ಹೂಗಾರ್ ಓಣಿ ಮಡಿವಾಳರ ಓಣಿ ದಿಡ್ಡಿಕೇರಿಯ ಕೆಲ ಭಾಗ ಬರುತ್ತದೆ ಇಲ್ಲಿ ಎರಡು ಬೂತ್ ಗಳಿವೆ ಬೂತ್ ಸಂಖ್ಯೆ 105 ಮತ್ತು 106 ಗಳಿದ್ದು ಈ ಎರಡು ಬೂತ್ ಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಿಂತ ಬಿಜೆಪಿ ಅಭ್ಯರ್ಥಿಗೆ ಹೆಚ್ಚು ಮತ ಲಭಿಸಿದೆ.

ಬೂತ್ ಸಂಖ್ಯೆ 105 ರಲ್ಲಿ 1,161 ಒಟ್ಟು ಮತದಾರ ರಲ್ಲಿ 982 ಮತದಾರರು ಮತ ಚಲಾಯಿಸಿದ್ದಾರೆ ಇದರಲ್ಲಿ 579 ಬಿಜೆಪಿ ಪಾಲಾದರೆ ಕೇವಲ 391 ಕಾಂಗ್ರೆಸ್ ಗೆ ಲಭಿಸಿದೆ ಅದೇ ರೀತಿ 106 ರಲ್ಲಿ 1047 ಒಟ್ಟು ಮತದಾರರಿದ್ದು 765 ಮತದಾನ ಚಲಾವಣೆಗೊಂಡು ಇದರಲ್ಲಿ ಬಿಜೆಪಿ 417 ಕಾಂಗ್ರೆಸ್ ಗೆ ಕೇವಲ 321 ಮತ ಸಿಕ್ಕಿದೆ ಎಂದು ಮೇಲ್ನೋಟಕ್ಕೆ ಕಂಡು ಬಂದಿದೆ ಇದೇ ರೀತಿ ಯಾವ ಯಾವ ವಾರ್ಡಿನಲ್ಲಿ ಹಿನ್ನಡೆ ಮುನ್ನಡೆ ನಡೆದಿದೆ ಎಂಬುದು ತಿಳಿದುಕೊಳ್ಳಬಹುದು.

ಮನೆಗೆದ್ದು ಮಾರ್ ಗೆಲ್ ಬೇಕು ಎಂಬ ಗಾದೆ ಮಾತು ಇದ್ದರೆ ಇವರು ಮನೆನೇ ಗೆಲ್ಲ ದವರು ಹೇಗೆ ಇಡಿ ನಗರವನ್ನು ನಿಭಾಯಿಸುತ್ತಾರೆ ಎಂಬುದು ಯಕ್ಷಪ್ರಶ್ನೆಯಾಗಿದೆ ಇಂತಹ ಘಟನೆ ಮತ್ತು ಇಂತಹ ನಿರ್ಲಕ್ಷದ ಕಾರ್ಯ ಎಲ್ಲೆಲ್ಲಿ ಜರುಗಿದೆ ಎಂಬುದು ಕಾಂಗ್ರೆಸ್ ವರಿಷ್ಠರು ಪರಿಶೀಲಿಸಿ ಅಗತ್ಯ ಕ್ರಮ ಕೈಗೊಂಡು ಅಗತ್ಯ ಅನುಗುಣ ಸಾರವಾಗಿ ಬದಲಾವಣೆ ಮಾಡಿಕೊಳ್ಳೋದು ಪಕ್ಷದ ಹಿತದೃಷ್ಟಿಯಿಂದ ಸೂಕ್ತ.

ಏನೇ ಆಗಲಿ 15 ವರ್ಷಗಳ ಬಳಿಕ ಈ ಬಾರಿ ಕಾಂಗ್ರೆಸ್ ಲೋಕಸಭಾ ಕ್ಷೇತ್ರದಲ್ಲಿ ಗೆದ್ದಿರುವುದು ವಿಶೇಷ ಮತ್ತು ಸಮಾಧಾನಕರ ವಿಷಯವಾಗಿದೆ ಎಂದು ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಕಾರ್ಯಕರ್ತರು ತಮ್ಮ ಅನಿಸಿಕೆ ವ್ಯಕ್ತಪಡಿಸಿದ್ದಾರೆ.

# ಜಿಲ್ಲಾ ಕಸಾಪದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಆಚರಣೆ

## ನಾಡಿನ ಸಾಹಿತ್ಯ ಸಂಸ್ಕೃತಿ ಶ್ರೀಮಂತಗೊಳಿಸಿದ ನಾಲ್ವಡಿ ಕೃಷ್ಣರಾಜ ಒಡೆಯರ್: ಡಾ.ಚಂದ್ರಶೇಖರ ಕಾಳನ್ನವರ

**ಬಾಗಲಕೋಟೆ :** ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತನ್ನು 1915 ರಲ್ಲಿ ಸ್ಥಾಪನೆ ಮಾಡುವ ಮೂಲಕ ಕನ್ನಡ ನಾಡು-ನುಡಿ ಹಾಗೂ ನೆಲ-ಜಲ ಮತ್ತು ಕನ್ನಡ ನಾಡಿನ ಪರಂಪರೆ, ಸಾಹಿತ್ಯ ಸಂಸ್ಕೃತಿಯನ್ನು ಶ್ರೀಮಂತಗೊಳಿಸಿದವರು ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಎಂದು ಕನ್ನಡ ಉಪನ್ಯಾಸಕ ಡಾ.ಚಂದ್ರಶೇಖರ ಕಾಳನ್ನವರ ಹೇಳಿದರು.




ಅವರು ನವನಗರದ ಕನ್ನಡ ಸಾಹಿತ್ಯ ಪರಿಷತ್ತು ಸಭಾಭವನದಲ್ಲಿ ಸೋಮವಾರ ಜರುಗಿದ ರಾಜಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ ಜನ್ಮ ದಿನಾಚರಣೆಯ ಸಮಾರಂಭದಲ್ಲಿ ಅವರ ಭಾವಚಿತ್ರಕ್ಕೆ ಪುಷ್ಪ ಸಲ್ಲಿಸಿ, ಉಪನ್ಯಾಸ ನೀಡಿ ಮಾತನಾಡಿದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಜೀವನ ಮತ್ತು ಸಾಧನೆ ಕನ್ನಡಿಗರಿಗೆ ಸ್ಫೂರ್ತಿಯಾಗಿದೆ. ಅವರು ನೀರಾವರಿ, ಶಿಕ್ಷಣ, ಆರೋಗ್ಯ, ಕೈಗಾರಿಕೆ, ಬ್ಯಾಂಕ್, ರಸ್ತೆ, ಮತ್ತು ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ನಾಡಿನ ವಿವಿಧ ಕ್ಷೇತ್ರದಲ್ಲಿ ಗಣನೀಯವಾದ ಸೇವೆ ಮಾಡಿ, ಕನ್ನಡಿಗರ ಮಹಾರಾಜರಾಗಿದ್ದರು ಇವರು ಸರ್ವಧರ್ಮ ಸಂಹಿಷ್ಣತೆ ಪಾಲನೆ ಮಾಡುವ ಮೂಲಕ ಕನ್ನಡ ಸಾಹಿತ್ಯ, ಸಂಗೀತ, ಸಾಂಸ್ಕೃತಿಕ ಲೋಕವನ್ನು ಶ್ರೀಮಂತಗೊಳಿಸಿದ ಮಹಾರಾಜರಾಗಿದ್ದಾರೆ ಎಂದರು.

ಬಾಗಲಕೋಟೆ ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾಧ್ಯಕ್ಷ ಶಿವಾನಂದ ಶೆಲ್ಲಿಕೇರಿ ಅವರು ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪನೆ ಮಾಡಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಜನ್ಮ ದಿನಾಚರಣೆ ಆಚರಿಸುವ ಮೂಲಕ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಾವೆಲ್ಲರೂ ಕನ್ನಡ ಸಾಹಿತ್ಯ ಪರಿಷತ್ತನ್ನು ಜನ ಸಾಮಾನ್ಯರ ಪರಿಷತ್ತಾಗಿಸುವಲ್ಲಿ ಕಾರ್ಯೋನ್ಮುಕರಾಗಿದ್ದೇವೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಹಿರಿಯ ಸಾಹಿತಿಗಳಾದ ಡಾ. ಮೈನುದ್ದೀನ್ ರೇವಡಿಗಾರ ಮತ್ತು ಜಾನಪದ ವಿದ್ವಾಂಸರಾದ ಡಾ.ಪ್ರಕಾಶ ಖಾಡೆ ಅವರು ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ರಾಜ ಮನೆತನದ ಕೀರ್ತಿ ಬೆಳಗಿಸಿ, ಸಾರ್ವಜನಿಕ ಪರವಾದ ಉತ್ತಮ ಸೇವೆಯನ್ನು ಮಾಡಿದ್ದಾರೆಂದು ಸ್ಮರಣೆ ಮಾಡಿದರು. ಹಿರಿಯ ಪತ್ರಕರ್ತರಾದ ಕಿರಣ ಬಾಳಗೋಳ ಅವರು ಮಾತನಾಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತಾವಧಿಯಲ್ಲಿ ಮೈಸೂರು ರಾಜ್ಯ ಸುವರ್ಣಯುಗವಾಗಿತ್ತು, ನೂರಾರು ಸಾಧನೆಗಳನ್ನು ಮಾಡಿದ ಹೆಗ್ಗಳಿಕೆ ಇವರದಾಗಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಸಿ.ಎನ್.ಬಾಳಕನ್ನವರ, ಕೃಷ್ಣಾ ಯಡಹಳ್ಳಿ, ಪ್ರೊ.ಸಂಗಮೇಶ ಬ್ಯಾಳಿ ಮತ್ತು ಕಸಾಪ ಬಾಗಲಕೋಟೆ ತಾಲೂಕ ಘಟಕದ ಅಧ್ಯಕ್ಷ ಪಾಂಡುರಂಗ ಸಣ್ಣಪ್ಪನವರ, ಶಿಕ್ಷಕ ನೀಲಪ್ಪ ಗಾಣಿಗೇರ ವೇದಿಕೆ ಮೇಲೆ ಉಪಸ್ಥಿತರಿದ್ದರು. ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ ಅಂಗವಾಗಿ ಸಾಧಕರಿಗೆ ಸನ್ಮಾನಿಸಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ಪಾಂಡುರಂಗ ಸಣ್ಣಪ್ಪನವರ ಸ್ವಾಗತಿಸಿದರು, ನೀಲಪ್ಪ ಗಾಣಿಗೇರ ವಂದಿಸಿದರು, ಪ್ರೊ.ಸಂಗಮೇಶ ಬ್ಯಾಳಿ ಕಾರ್ಯಕ್ರಮ ನಿರೂಪಿಸಿದರು.

# ಶಿಕ್ಷಣ ಮತ್ತು ವೃತ್ತಿ ಮಾರ್ಗದರ್ಶನ ತರಬೇತಿ ಕಾರ್ಯಕ್ರಮದ ಉದ್ಘಾಟನೆ



**ಕೊಪ್ಪಳ :** ಸ್ನೇಹ ಸಂಸ್ಥೆ ಕೊಪ್ಪಳ ವತಿಯಿಂದ ಕಿಶೋರ ಕಿಶೋರಿಯರಿಗೆ ದಶಿಕ್ಷಣ ಮತ್ತು ವೃತ್ತಿ ಮಾರ್ಗದರ್ಶನ ತರಬೇತಿ ಕಾರ್ಯಕ್ರಮದ ಉದ್ಘಾಟನೆ ಸಮಾರಂಭ ತಾಲೂಕು ಪಂಚಾಯಿತಿ ಅವರಣದಲ್ಲಿರುವ ಕೃಷಿ ವಿಸ್ತೀರ್ಣ ಕೇಂದ್ರದ ಸಭಾಂಗಣದಲ್ಲಿ ಸೋಮವಾರ ಬೆಳಗ್ಗೆ ಯಶಸ್ವಿಯಾಗಿ ಉದ್ಘಾಟನೆಗೊಂಡಿತು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಸ್ನೇಹ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಟಿ ರಾಮಾಂಜನೇಯ ರವರು ಸಮಾರಂಭದ ಅಧ್ಯಕ್ಷತೆ ವಹಿಸಿ ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿ ಕಿಶೋರ ಕಿಶೋರಿಯರು ವೃತ್ತಿಶಿಕ್ಷಣ ದ ಮಹತ್ವ ಅರಿತುಕೊಂಡು ತರಬೇತಿಗಳ ಸದುಪಯೋಗ ಪಡೆದುಕೊಂಡು ಸ್ವಾವಲಂಬಿಗಳಾಗಿ ಬದುಕು ಬೇಕು ತರಬೇತಿಗಳ ಸದುಪಯೋಗ ಪಡೆದು-ಕೊಂಡು ತಮ್ಮ ಮುಂದಿನ ಭವಿಷ್ಯ ರೂಪಿಸಿಕೊಳ್ಳಲು ಯುವಕ ಯುವತಿಯರು ಮುಂದಾಗಬೇಕು ಎಂದರು.

ಕೃಷಿ ಶಿಕ್ಷಣ ಮತ್ತು ವಿಸ್ತೀರ್ಣ ಕೇಂದ್ರದ ಸಹಾಯಕ ಪ್ರಾಧ್ಯಾಪಕರಾದ ವಾಮನ್ ಮೂರ್ತಿಯವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡಿಯುವಕ ಯುತಿಯರು ದೇಶ ಅಭಿಮಾನ ಬೆಳೆಸಿಕೊಳ್ಳಬೇಕು ಕಿರಿಯ ಶೀಲರಾಗಿ ಸಾಮಾಜಿಕ ಚಟುವಟಿಕೆಯಲ್ಲಿ ತೊಡಗಿಸಿಕೊಂಡು ಉತ್ತಮ ಪ್ರಜೆಗಳಾಗಬೇಕು ತಮ್ಮ ಭವಿಷ್ಯ ರೂಪಿಸಿಕೊಳ್ಳಬೇಕು ತರಬೇತಿಗಳ ಸದುಪಯೋಗ ಪಡೆದುಕೊಳ್ಳಬೇಕು ಎಂದರು.

ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಪತ್ರಕರ್ತ ಎಂ ಸಾಧಿಕ್ ಅಲಿ ನೆರವೇರಿಸಿ ಮಾತನಾಡಿದರು ವೇದಿಕೆ ಮೇಲೆ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ ಸಂಯೋಜಕ ಶರಣಪ್ಪ ಪಾಲ್ಗೊಂಡು ತರಬೇತಿ ನೀಡಿದರು ಕಿಶೋರಿಯರ ಪರವಾಗಿ ಕುಮಾರಿ ಯಮುನಾ ಅತಿಥಿಗಳಾಗಿ ಪಾಲ್ಗೊಂಡಿದ್ದು ಸ್ನೇಹ ಸಂಸ್ಥೆಯ ಸಂಯೋಜಕಿ ಶೋಭಾ ರವರು ಕಾರ್ಯಕ್ರಮ ನಿರೋಪಿಸಿದ ರೂ ಇನ್ನೂರುವ ಸಂಯೋಜಕೀ ಗಾಯತ್ರಿ ಅವರು ಕೊನೆಯಲ್ಲಿ ವಂದಿಸಿದರು.

# ಕವಲಗಿ ಅಂತರಾಷ್ಟ್ರೀಯ ವಸತಿ ಶಾಲೆಯಲ್ಲಿ ಅಕ್ಷರಾಭ್ಯಾಸ ಕಾರ್ಯಕ್ರಮ

**ವಿಜಯಪುರ :** ಕವಲಗಿಯ ಶ್ರೀ ಸಿದ್ಧೇಶ್ವರ ಸಂಸ್ಥೆಯ ಸಂಗನಬಸವ ಅಂತರಾಷ್ಟ್ರೀಯ ವಸತಿ ಶಾಲೆಯಲ್ಲಿ ಪ್ರಸಕ್ತ ಶೈಕ್ಷಣಿಕ ವರ್ಷದ ಶುಭಾರಂಭದ ದ್ಯೋತಕವಾಗಿ ಸರಸ್ವತಿ ಪೂಜೆ ಹಾಗೂ ಅಕ್ಷರಾಭ್ಯಾಸ ಕಾರ್ಯಕ್ರಮವನ್ನು ಸೋಮವಾರ ಹಮ್ಮಿಕೊಳ್ಳಲಾಯಿತು.

ಎಲ್.ಕೆ.ಜಿ.ಗೆ ಸೇರಿದ ಪ್ರತಿಯೊಬ್ಬ ವಿದ್ಯಾರ್ಥಿಯ ಕೈ ಹಿಡಿದು ಶಿಕ್ಷಕ ವೃಂದ ಅಕ್ಷರಾಭ್ಯಾಸ ಮಾಡಿದ್ದು ಕಾರ್ಯಕ್ರಮದ ವೈಶಿಷ್ಟ್ಯವಾಗಿತ್ತು. ಸರಸ್ವತಿ ಸ್ತುತಿಯೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಸರಸ್ವತಿ, ಸಿದ್ಧರಾಮೇಶ್ವರ ಹಾಗೂ ಸಂಗನಬಸವ ಸ್ವಾಮೀಜಿ ಭಾವಚಿತ್ರಗಳಿಗೆ ಪುಷ್ಪಾಂಜಲಿ ಅರ್ಪಿಸಲಾಯಿತು.




ಪ್ರಾಂಶುಪಾಲೆ ಶರ್ಮಿಳಾ ಹೇಮಂತ ಮಾತನಾಡಿ, ಈ ವರ್ಷದಲ್ಲಿ ವಿದ್ಯಾರ್ಥಿಗಳು, ಶಿಕ್ಷಕರು ಇನ್ನಷ್ಟು ಹುಮ್ಮಸ್ಸಿನಿಂದ ಕಾರ್ಯ ವಹಿಸಿ ಎಲ್ಲಾ ರಂಗದಲ್ಲೂ ಶಾಲೆ ಮತ್ತಷ್ಟು ಪ್ರಗತಿ ಸಾಧಿಸಬೇಕು ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಮಾತನಾಡಿದ ಕಾಲೇಜಿನ ಪ್ರಾಚಾರ್ಯ ಹೇಮಂತ ಕೃಷ್ಣ ಅವರು, ಮಕ್ಕಳಿಗೆ ಹೊಸ ವಾತಾವರಣಕ್ಕೆ ಹೊಂದಲು ತುಸು ಸಮಯ ಬೇಕಾಗುತ್ತದೆ. ಶೈಕ್ಷಣಿಕ ಪ್ರಗತಿಯೊಂದಿಗೆ ಉತ್ತಮ ಸಂಸ್ಕಾರ, ಜೀವನ ಮೌಲ್ಯಗಳನ್ನೂ ಅಳವಡಿಸಿಕೊಳ್ಳಿ ಎಂದು ಹಿತವಚನ ನೀಡಿದರು.

ಅಂಗ್ಲ ಭಾಷೆ ಪ್ರಾಧ್ಯಾಪಕ ಗುರುದೇವ ಹೋಳಿ ಸ್ವಾಗತಿಸಿದರು. ಶಿಕ್ಷಕ ಮಧ್ವಪ್ರಸಾದ ಕುಲಕರ್ಣಿ ನಿರೂಪಿಸಿದರು. ಗಣಿತ ವಿಷಯ ಪ್ರಾಧ್ಯಾಪಕಿ ವೈಷ್ಣವಿ ಶೀಳಿನ ವಂದಿಸಿದರು.

ಶ್ರೀ ಸಿದ್ಧೇಶ್ವರ ಸಂಸ್ಥೆಯ ಅಧ್ಯಕ್ಷ, ಶಾಸಕ ಬಸನಗೌಡ ಪಾಟೀಲ (ಯತ್ನಾಳ), ಚೇರ್ಮನ್ ಬಸಯ್ಯ ಹಿರೇಮಠ, ನಿರ್ದೇಶಕರು ಹಾಗೂ ಪದಾಧಿಕಾರಿಗಳು ಶುಭ ಹಾರೈಸಿದರು.

# ನವಲಗುಂದ: ಸೈಕಲ್ ಜಾಥಾ




**ನವಲಗುಂದ :** ಸೈಕಲ್ ಸವಾರಿ ಇಂದಿನ ದಿನಮಾನಕ್ಕೆ ಪ್ರತಿಯೊಬ್ಬರಿಗೂ ಅತ್ಯಾವಶ್ಯಕವಾಗಿದೆ. ಇಂದು ನಾವೆಲ್ಲರೂ ಸೇವಿಸುತ್ತಿರುವ ವಿಷಕಾರಿ ಆಹಾರ, ಗಾಳಿ, ಸೇವನೆ ಸರ್ವೇಸಾಮಾನ್ಯವಾಗಿದೆ. ಇದೆಲ್ಲಕ್ಕೆ ಮುಕ್ತಿ ಕಾಣಿಸಲು ನಾವೆಲ್ಲರೂ ಮರಳಿ ಸೈಕಲ್ ಗೆ ತೇರಳಬೇಕಾಗಿದೆ ಎಂದು ಧಾರವಾಡದ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಡಾ. ಪ್ರಕಾಶ್ ಹೊಸಮನಿ ಅಭಿಪ್ರಾಯ ವ್ಯಕ್ತಪಡಿಸಿದರು.
ಅವರು ಸ್ಥಳೀಯ ಶಂಕರ ಕಲಾ ಹಾಗೂ ವಾಣಿಜ್ಯ ಮಹಾವಿದ್ಯಾಲಯದ ಎನ್ ಎಸ್ ಎಸ್ ಘಟಕದಡಿಯಲ್ಲಿ ಜೂನ್ 3 "ವಿಶ್ವ ಸೈಕಲ್ ದಿನದ " ಅಂಗವಾಗಿ ಹಮ್ಮಿಕೊಂಡ ಸೈಕಲ್ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು ಉತ್ತಮ ಆರೋಗ್ಯ, ಇಂಧನ ಉಳಿತಾಯ, ಸ್ವಚ್ಚವಾದ ಗಾಳಿ ಸೇವಿಸಲು ಎಲ್ಲರಿಗೂ ಅನುಕೂಲವಾಗಲಿದೆ.
ಕೇಂದ್ರ ಸರ್ಕಾರ ದೇಹದಂಡನೆಗೆ "ಫಿಟ್ ಇನ್ ಇಂಡಿಯಾ"ಎಂಬ ಯುವಕರಿಗೆ ನೂತನ ಕಾರ್ಯಕ್ರಮ ಜಾರಿಗೆ ತಂದಿದೆ. ಅದ್ದರಿಂದ ಯುವಕರು ಇನ್ನುಮುಂದೆ ಕಡ್ಡಾಯವಾಗಿ ಸಮೀಪವಾದ ಸ್ಥಳಕ್ಕೆ ಹೋಗಲು ಸೈಕಲ್ ಅನ್ನೆ ಬಳಸಿ, ಮುಂದುವರಿದ ರಾಷ್ಟಗಳಲ್ಲಿ ಎಲ್ಲರೂ ಈಗ ಸೈಕಲ್ ಅನ್ನು ಹೆಚ್ಚು ಬಳಸಲು ಪ್ರಾರಂಬಿಸಿದ್ದಾರೆ ಎಂದರು.
ನಂತರ ಸ್ವಯಂ ಸೇವಕರು ಮಹಾವಿದ್ಯಾಲಯದಿಂದ ಪಟ್ಟಣದ ವಿವಿಧ ಬೀದಿ ಗಳಲ್ಲಿ ಜಾಥಾ ಮೂಲಕ ಜನಸಾಮಾನ್ಯರಲ್ಲಿ ಜಾಗೃತಿ ಮೂಡಿಸಿದರು.
ಕಾರ್ಯಕ್ರಮದಲ್ಲಿ ಜಂಟಿ ನಿರ್ದೇಶಕರ ಕಚೇ–ರಿಯ ವಿಶೇಷಧಿಕಾರಿಗಳಾದ ಡಾ. ಎ ಎಂ ಶಿರಹಟ್ಟಿ, ಉಪನಿರ್ದೇಶಕರಾದ ಲಕ್ಷ್ಮಿಪತಿ, ಮಹಾವಿದ್ಯಾಲಯದ ಪ್ರಾಚಾರ್ಯರಾದ ಡಾ. ಶ್ರೀನಿವಾಸ್ ಬಡಿಗೇರ ಹಾಗೂ ಪ್ರೊ?ರ ಜೆ ಪಿ ಲಮಾಣಿ, ಮಹಾವಿದ್ಯಾಲಯದ ಪ್ರಧ್ಯಾಪಕರಾದ ಡಾ. ಶೀಲಾ ತುಬುಚಿ, , ಡಾ. ಎಂ ಎನ್ ಹಾರೋಗೇರಿ ,ಡಾ ರಮೇಶ ಚವ್ವಾಣ, ಡಾ ಆರ್ ಎಂ ಸರ್ವದೆ, ಡಾ ರುದ್ರಮುನಿ, ವಿಜಯಲಕ್ಷ್ಮಿ ಸಾವಂತ, ಹಾಗೂ ಕಛೇರಿ ಸಿಬ್ಬಂದಿಗಳಾದ ಎಂ ವಿ ಹೊಳೆಯನ್ನವರ, ಬಿ ಕೆ ಮಹೇಶ್, ಎನ್ ಎಸ್ ಎಸ್ ಸ್ವಯಂ ಸೇವಕರ ಪ್ರತಿನಿಧಿಯಾದ ಕುಮಾರ ರಾಜೇಶ್ ದೊಡ್ಡಮನಿ, ಎಲ್ಲ ಸ್ವಯಂ ಸೇವಕರು, ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಧಾರವಾಡ: ಉಪನ್ಯಾಸ ಕಾರ್ಯಕ್ರಮ




**ಧಾರವಾಡ :** ಕನ್ನಡ ಸೃಜನಶೀಲತೆ ಕಡಿಮೆಯಾಗಿದ್ದ ಸಂದರ್ಭದಲ್ಲಿ ಕನ್ನಡದ ಮೇಲೆ ಅಧಮ್ಯವಾದ ಪ್ರೀತಿಯನ್ನು ಹೊಂದಿದ್ದ ಬಿ.ಎಂ. ಶ್ರೀಯವರು ಇಂಗ್ಲೀಷನ ಕೆಲವು ಗೀತೆಗಳನ್ನು ಕನ್ನಡಕ್ಕೆ ಅನುವಾದಿಸಿದರು ಎಂದು ನಿವೃತ್ತ ಇಂಗ್ಲೀಷ ಪ್ರಾಧ್ಯಾಪಕ, ಸಾಹಿತಿ ಡಾ. ವಿ. ಟಿ. ನಾಯಕ ಅಭಿಪ್ರಾಯಪಟ್ಟರು.
ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ಡಾ.ಮಲ್ಲಿಕಾರ್ಜುನ ದತ್ತಿ ನಿಮಿತ್ತ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ 'ಕನ್ನಡ ಸಾಹಿತ್ಯಕ್ಕೆಇಂಗ್ಲೀಷ ಪ್ರಾಧ್ಯಾಪಕರಕೊಡುಗೆ' ವಿಷಯ ಕುರಿತು ಮಾತನಾಡುತ್ತಿದ್ದರು.
ಮುಂದುವರೆದು ಮಾತನಾಡಿದ ಅವರು ಬೇರೆ ಬೇರೆ ಪತ್ರಿಕೆಯಲ್ಲಿ ಪ್ರಕಟಗೊಂಡ ಅನುವಾದಿತ ಗೀತೆಗಳನ್ನು 1926 ರಲ್ಲಿ ಇಂಗ್ಲೀಷ ಗೀತೆಗಳು' ಎಂಬ ಶೀರ್ಷಿಕೆಯೊಂದಿಗೆ ಪ್ರಕಟಿಸಿದರು. ಕನ್ನಡ ಸಾಹಿತ್ಯದಲ್ಲಿ ಇದೊಂದು ಮೈಲುಗಲ್ಲಾಯಿತು ವಿಷಯ, ಛಂದೋ ವೈವಿಧ್ಯದ ದೃಷ್ಟಿಯಿಂದ ಈ ಕೃತಿಕನ್ನಡದ ಇತಿಹಾಸದಲ್ಲಿ ದಾಖಲೆಯಾಗಿದೆ. ಭಾವಗೀತೆ, ಸಣ್ಣಕಥೆ, ಕಾದಂಬರಿ, ಲಘು ಪ್ರಬಂಧ, ಅನುವಾದ ಸಾಹಿತ್ಯ ಮೊದಲಾದ ಪ್ರಭೇದಗಳಲ್ಲಿ ಇಂಗ್ಲೀಷ ಪ್ರಾಧ್ಯಾಪಕರು ಕನ್ನಡದಲ್ಲಿ ಸಾಹಿತ್ಯ ಕೃಷಿ ಮಾಡಿದ್ದನ್ನು ಕಾಣುತ್ತೇವೆ.ಕರುಣಾಳು ಬಾ ಬೆಳಕೆ ಮುಸುಕಿದಿ ಮಬ್ಬಿನಲಿ' ಬಿ.ಎಂ.ಶ್ರೀಯವರು ಅನುವಾದಿಸಿದ ಈ ಕಾವ್ಯ ಉತ್ಕೃಷ್ಟವಾಗಿದೆ. ಬೇರೆಯವರು ಅನುವಾದ ಮಾಡಲು ಇದೊಂದು ರಹದಾರಿಯಾಯಿತು. ನಾಟಕ ಸಾಹಿತ್ಯದಲ್ಲಿದುರಂತನಾಟಕಗಳಕೊರತೆ ಇತ್ತು.ಭಾರತೀಯ ಪರಂಪರೆಯಲ್ಲಿಇದ್ದಈಕೊರತೆಯನ್ನುಬಿ.ಎಂ.ಶ್ರೀಯವರು ರನ್ನನ ಮಹಾಕಾವ್ಯಗಳ ಮೂಲಕ ರನ್ನದಗದಾಯುದ್ಧದ ಧುರ್ಯೋದನ, ರಾಮಾಯಣದ ರಾವಣ ಇಂತಹ ಪಾತ್ರಗಳನ್ನು ದುರಂತದ ದೃಷ್ಟಿಯಿಂದ ನೋಡಿ ನಾಟಕ ರಚನೆಗೆ ಸೂಚನೆ ಕೊಟ್ಟರು.
ಎಸ್. ವ್ಹಿ. ರಂಗಣ್ಣಅವರು ಪಾಶ್ಚಾತ್ಯಗಂಭೀರ ನಾಟಕಗಳನ್ನು ರಚಿಸಿದರು.ಎ.ಎನ್. ಮೂರ್ತಿರಾಯರು ಲಲಿತ ಪ್ರಬಂಧಗಳನ್ನು, ಕೀರ್ತಿನಾಥಕುರ್ತಕೋಟಿ, ಕೆ.ವಿ. ತಿರುಮಲೇಶಇವರು ನಿತ್ಯಜೀವನದ ಘಟನೆಗಳ ಜೊತೆಗೆ ವಿಮರ್ಶಾತ್ಮಕದೃಷ್ಟಿಕೋನಗಳ ಹಿನ್ನೆಲೆಯಲ್ಲಿಅಂಕಣ ಬರಹಗಳನ್ನು ಪತ್ರಿಕೆಗಳಲ್ಲಿ ಬರೆಯತೊಡಗಿದರು.ಈ ಬರವಣಿಗೆ ಮನರಂಜನೆಅಥವಾಟೈಮಪಾಸ್ಗಾಗಿ ಬರೆದವುಗಳಲ್ಲ. ಗಂಭೀರವಾದ ವಿಷಯಗಳ ನಿರೂಪ 'ಣೆಇಲ್ಲಿಇರುವುದನ್ನುಕಾಣುತ್ತೇವೆ. ಕನ್ನಡ ಸಾಹಿತ್ಯದಲ್ಲಿ ವಡ್ಡಾರಾಧನೆ, ಪಂಚತಂತ್ರಗಳ ಕಥಾ ಪರಂಪರೆಇತ್ತು.ವಿ.ಕೃ. ಗೋಕಾಕ ಮಲ್ಲಿಕಾರ್ಜುನ ಹಿರೇಮಠ, ವೀಣಾ ಶಾಂತೇಶ್ವರ ವಿ.ಎನ್. ಇನಾಮದಾರ, ಶಾಂತಿನಾಥದೇಸಾಯಿ, ಲಂಕೇಶ, ಮೊದಲಾದವರು ಸಣ್ಣಕಥೆ, ಕಾದಂಬರಿಗಳನ್ನು ಬರೆದರು.
ಕೆಲವು ಸಾಹಿತಿಗಳು ಇಂಗ್ಲೀಷನಿಂದಕನ್ನಡಕ್ಕೆಕನ್ನಡದಿಂದಇಂಗ್ಲೀಷಿಗೆಅನುವಾದವನ್ನು ಮಾಡಿದರು.ಚಂಪಾ, ಗಿರಡ್ಡಿ, ಯರವಿನತೆಲಿಮಠ, ಬಿ.ಆರ್.ಪೋಲಿಸಪಾಟೀಲ, ಸರೋಜಿನಿ ಶಿಂತ್ರಿ, ಕೆ.ಎಸ್. ಅಮೂರ, ಎ.ಎಕೆ. ರಾಮಾನುಜಮ್ ಮೊದಲಾದವರೆಲ್ಲಇಂಗ್ಲೀಷ ಸಾಹಿತ್ಯವನ್ನುಅಧ್ಯಯನ ಮಾಡಿದವರಾಗಿದ್ದುಉತ್ಕೃಷ್ಟವಾದಕೊಡುಗೆಯನ್ನು ನೀಡಿಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ ಎಂದರು.
ಸಮಾರಂಭದಅಧ್ಯಕ್ಷತೆ ವಹಿಸಿದ್ದ ನಿವೃತ್ತಐ.ಎ.ಎಸ್. ಅಧಿಕಾರಿ ಜಿ. ವಿ.ಕೊಂಗವಾಡಅವರು, ಇಂಗ್ಲೀಷಅಧ್ಯಯನವನ್ನು ಮಾಡಿದ ನಾನು ಅನೇಕ ಇಂಗ್ಲೀಷ ಪ್ರಾಧ್ಯಾಪಕರು ಬರೆದಕನ್ನಡ ಸಾಹಿತ್ಯವನ್ನು ಓದಿ ನನ್ನಜ್ಞಾನವನ್ನು ಹೆಚ್ಚಿಸಿಕೊಂಡಿದ್ದೇನೆ. ಕೆಲವು ಪ್ರಾಧ್ಯಾಪಕರುಅನುವಾದ ಮಾಡಿದ ಸಾಹಿತ್ಯ ಮನಸ್ಸಿನ ಮೇಲೆ ಅಪಾರವಾದ ಪರಿಣಾಮ ಬೀರಿದ್ದುಂಟುಎಂದು ಹೇಳಿದರು.
ವೇದಿಕೆ ಮೇಲೆ ಸಂಘದಅಧ್ಯಕ್ಷಚಂದ್ರಕಾಂತ ಬೆಲ್ಲದ, ಡಾ.ಮಲ್ಲಿಕಾರ್ಜುನಪಾಟೀಲಹಾಗೂದತ್ತಿದಾನಿಡಾ.ನಂದಾ ಪಾಟೀಲ ಉಪಸ್ಥಿತರಿದ್ದರು.
ಶಂಕರ ಕುಂಬಿ ಸ್ವಾಗತಿಸಿದರು.ಡಾ. ಮಹೇಶ ಹೊರಕೇರಿ ಪ್ರಾಸ್ತಾವಿಕವಾಗಿ ಮಾತನಾಡಿದರು.ಡಾ. ಜಿನದತ್ತ ಹಡಗಲಿ ನಿರೂಪಿಸಿದರು. ವೀರಣ್ಣಒಡ್ಡೀನ ವಂದಿಸಿದರು.
ಕಾರ್ಯಕ್ರಮದಲ್ಲಿ ಶಿವಾನಂದ ಭಾವಿಕಟ್ಟಿ, ಡಾ.ಸಿ.ಆರ್. ಯರವಿನತೆಲಿಮಠ, ಸಿ.ಎಂ.ಕುಂದಗೋಳ, ಸಿ.ಎಸ್. ಪಾಟೀಲ, ಎಸ್.ಜಿ. ಪಾಟೀಲ, ನಿಂಗಣ್ಣಕುಂಟಿ, ಶಾಂತವೀರ ಬೆಟಗೇರಿ, ಡಾ.ಮಲ್ಲಿಕಾರ್ಜುನ ಹಿರೇಮಠ, ನಿಂಗೋಜಿ, ಶಿವಾನಂದ ಶೆಟ್ಟೆಣ್ಣವರ, ಆರ್.ಜಿ.ತಿಮ್ಮಾಪೂರ, ಕುಸುಗಲ್, ರಾಜೇಂದ್ರಸಾವಳಗಿ,ಬಿ.ಆಯ್.ಈಳಿಗೇರಉಪಸ್ಥಿತರಿದ್ದರು.

# ಬೆಳಗಾವಿ: ಮಹಿಳೆ ನಾಪತ್ತೆ

**ಬೆಳಗಾವಿ :** ಮೂಡಲಗಿ ತಾಲೂಕಿನ ಸಾ.ಢವಳೇಶ್ವರ ಎಂಬ ಗ್ರಾಮದ ರೇಣುಕಾ ಯಂಕಪ್ಪ ಮಕ್ಕನ್ನವರ ಇವರು ಜೂ.25 ರಂದು ಬಿಲಕುಂದಿ ತನ್ನ ತವರು ಮನೆಯಿಂದ ಢವಳೇಶ್ವರದ ಗಂಡನ ಮನೆಗೆ ಹೋಗುತ್ತೇನೆ ಎಂದು ಹೇಳಿ ಹೋದವಳು ತನ್ನ ಗಂಡನ ಮನೆಗೆ ಹೋಗದೆ ಎಲ್ಲಿಯೋ ಹೋಗಿ ಕಾಣೆಯಾಗಿರುತ್ತಾಳೆ ಎಂದು ತಂದೆ ಸತ್ತೆಪ್ಪ ಬೆಳಗಲಿ ಅವರು ಕುಲಗೋಡ ಪೊಲೀಸ್ ಠಾಣೆಯಲ್ಲಿ ದೂರು



ದಾಖಲಿಸಿದ್ದಾರೆ.
ಕಾಣೆಯಾದ ಮಹಿಳೆಯ ವಿವರ; ವಯಸ್ಸು 33 ವರ್ಷ, 5 ಪುಟ ಎತ್ತರ, ಸಾಧಾರಣ ಮೈಕಟ್ಟು, ಸಾದಗಪ್ಪು ಮೈಬಣ್ಣ, ಉದ್ದವಾದ ಮುಖ ಇರುವುದು. ಗುಲಾಬಿ ಬಣ್ಣದ ಸೀರೆ ಧರಿಸಿರುತ್ತಾಳೆ.
ಸದರಿ ಕಾಣೆಯಾದ ಮಹಿಳೆ ಬಗ್ಗೆ ಮಾಹಿತಿ ದೊರೆತಲ್ಲಿ ಪೊಲೀಸ್ ಠಾಣೆಯ ದೂರವಾಣಿ:08334222233 ಅಥವಾ kulgodbgm@ksp.gov.in ಇ–ಮೇಲ್ ವಿಳಾಸಕ್ಕೆ ಸಂಪರ್ಕಿಸಬಹುದು ಎಂದು ಕುಲಗೋಡ ಪೊಲೀಸ್ ಠಾಣೆಯ ಠಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ನರೇಗಾ ಯೋಜನೆಯಡಿ ನಾಲಾ ಹೂಳೆತ್ತುವ ಕಾಮಗಾರಿ ವೀಕ್ಷಣೆ ಮಾಡಿದ ಜಿಪಂ ಸಿಇಓ

**ಧಾರವಾಡ :** ಜಿಲ್ಲೆಯ ಕೋಟೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಶಿಂಗನಹಳ್ಳಿ ಗ್ರಾಮದಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಕೈಗೊಳ್ಳಲಾಗಿರುವ ನಾಲಾ ಹೂಳೆತ್ತುವ ಕಾಮಗಾರಿಯನ್ನು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸ್ವರೂಪ ಟಿ.ಕೆ. ಅವರು ನಿನ್ನೆ (ಮೇ.28) ದಿನ ಭೇಟಿ ನೀಡಿ, ವೀಕ್ಷಿಸಿದರು.
ಶಿಂಗನಹಳ್ಳಿ ಗ್ರಾಮದ ಕಾಮಗಾರಿಯನ್ನು ವೀಕ್ಷಿಸಿ ಅವರು ಕೂಲಿಕಾರರ ಸಮಸ್ಯೆ ಹಾಗೂ ಸೌಲಭ್ಯಗಳ ಬಗ್ಗೆ ಚರ್ಚಿಸಿ, ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಹಮ್ಮಿಕೊಳ್ಳಲಾದ ಕಾಮಗಾರಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಭಾಗವಹಿಸಲು ಅವರು ತಿಳಿಸಿದರು.
ನಂತರ ಅವರು ಶಿಂಗನಹಳ್ಳಿಯಲ್ಲಿರು ಕೂಸಿನ ಮನೆಗೆ ಬೇಟಿ ನೀಡಿದರು.
ಈ ಸಂದರ್ಭದಲ್ಲಿ ಸಹಾಯಕ ನಿರ್ದೇಶಕರಾದ ಚಂದ್ರು ಪೂಜಾರ , ಪಿಡಿಓ, ತಾಂತ್ರಿಕ ಸಹಾಯಕರು ಹಾಗೂ ಸಿಬ್ಬಂದಿಯವರು ಹಾಜರಿದ್ದರು.



# ಪ್ರತಿದಿನ ಪರಿಸರ ದಿನವಾಗಬೇಕು: ಲಕ್ಷ್ಮಣ ಪಾಟೀಲ

**ರಾಯಬಾಗ :** ಪರಿಸರ ದಿನಾಚರಣೆಯಂದು ಪರಿಸರ ಕಾಳಜಿ ಮೆರೆದು ಮೈಮರೆಯಬಾರದು. ಪ್ರತಿದಿನ ಪರಿಸರ ದಿನವಾಗಬೇಕೆಂದು ಎಸ್.ಡಿ.ಎಮ್.ಸಿ ಅಧ್ಯಕ್ಷ ಲಕ್ಷ್ಮಣ ಪಾಟೀಲ ಅಭಿಮತ ಹಂಚಿಕೊಂಡರು.
ಅವರು ಸಮೀಪದ ಚಿಕ್ಕೂಡ ಸರಕಾರಿ ಪ್ರೌಢ ಶಾಲೆಯಲ್ಲಿ ಆಯೋಜಿಸಿದ ಪರಿಸರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ರಾಜೇಂದ್ರ ಕುಮಠಿ ಅತಿಥಿಗಳಾಗಿ ಪಾಲ್ಗೊಂಡಿದ್ದರು. ಮುಖ್ಯೋಪಾಧ್ಯಾಯ ರವೀಂದ್ರ ಪಾಟೀಲ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ "ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ. ನಮ್ಮ ರಕ್ಷಾ ಕವಚವನ್ನು ನಾವೇ ಸಂರಕ್ಷಿಸಬೇಕೆಂದು ಹೇಳಿದರು.
ಪ್ರೀತಿ ಸಂಕೋನಟ್ಟಿ ಸಹನಾ ಕತ್ತಿ ಶಿಲ್ಪಾ ವಡ್ಡರ ಸಾಕ್ಷಿ ಮಠಪತಿ ಸಸಿಗಳನ್ನು ದಾಸೋಹಗೈದರು.ಸಾವನಕುಮಾರ ಗಸ್ತಿ, ಶಂಕರ ಕಾಂಬಳೆ, ಪಾರಿಸ ಬಳೋಜ, ಸುಮಿತ್ರಾ ಮಗೆಣ್ಣವರ, ಜ್ಯೋತಿ ಮಹಾಬಳಶೆಟ್ಟಿ, ಶ್ರೀಕಾಂತ ಹಳ್ಳೂರ



ಲಕ್ಷ್ಮೀ ಮಗದುಮ್ಮ ಉಪಸ್ಥಿತರಿದ್ದರು. ಸುಶ್ಮಿತಾ ಬಚ್ಚನ್ನವರ ನಿರೂಪಿಸಿದರು.ದಾವಲಸಾಬ ಅರಳಿಕಟ್ಟಿ ಸ್ವಾಗತಿಸಿದರು.ಅಂಕಿತಾ ಕುಮಟಿ ಶರಣು ಸಮರ್ಪಿಸಿದರು.


**ವರದಿ : ಡಾ. ಜಯವೀರ ಎ.ಕೆ.**
**ಖೇಮಲಾಪುರ**

# ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆಗೆ ಸಾರ್ವಜನಿಕರ ಸಹಕಾರ ಅಗತ್ಯ: ಜಿಡ್ಡಿಮನಿ



**ಚಿಮ್ಮಡ :** ಗ್ರಾಮೀಣ ಭಾಗದಲ್ಲಿ ಇನ್ನೂ ಹಲವೆಡೆ ಜೀವಂತವಾಗಿರುವ ಬಾಲ ಕಾರ್ಮಿಕ ಪದ್ದತಿಯನ್ನು ಸಂಪೂರ್ಣ ನಿರ್ಮೂಲನೆಗೆ ಸಾರ್ವಜನಿಕರ ಸಹಕಾರ ಅಗತ್ಯವೆಂದು ಹಿರಿಯ ನ್ಯಾಯವಾದಿ ಅರ್ಜುನ ಜಿಡ್ಡಿಮನಿ ಹೇಳಿದರು.
ಇಲ್ಲಿನ ಗ್ರಾಮ ಪಂಚಾಯತಿ ಸಬಾಭವನದಲ್ಲಿ ಗ್ರಾಮೀಣಾಭಿವೃದ್ದಿ ಮತ್ತು ಪಂಚಾಯತ್‌ರಾಜ ಇಲಾಖೆ, ಜಿಲ್ಲಾ ಪಂಚಾಯತ, ತಾಲೂಕಾ ಪಂಚಾಯತ, ಗ್ರಾಮ ಪಂಚಾಯತಿಯ ಸಹಯೋಗದಲ್ಲಿ ಬುಧವಾರ ಹಮ್ಮಿಕೊಳ್ಳಲಾಗಿದ್ದ ಬಾಲಕಾರ್ಮಿಕರ ರಕ್ಷಣಾ ಅಭಿಯಾನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಅವರು ಇಂದಿನ ಮಕ್ಕಳೇ ದೇಶದ ಆಸ್ತಿ, ಅವರನ್ನು ಸದೃಢ, ಸುಶೀಕ್ಷರನ್ನಾಗಿ ಬೆಳೆಸಿದಲ್ಲಿ ದೇಶದ ಉತ್ತಮ ಪ್ರಜೆಗಳಾಗಲು ಸಾಧ್ಯ. ಉತ್ತಮ ಶಿಕ್ಷಣ ನೀಡದೆ ಬಾಲ ಕಾರ್ಮೀಕರನ್ನಾಗಿ ಬೆಳೆಸಿದಲ್ಲಿ ನಮ್ಮ ಪೂರ್ವಜರ ಹಾಗೆ ಜೀತಪದ್ದತಿ,ಗುಲಾಮಗಿರಿಯಆಶ್ರಯದಲ್ಲಿ ಬದುಕಬೇಕಾಗುತ್ತದೆ ಈ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಅವಶ್ಯಕತೆಯಿದೆ ಎಂದರು.
ಶಿಕ್ಷಣ ಸಂಯೋಜಕ ಬಿ.ಎಂ. ಹಳೆಮನಿ ಮಾತನಾಡಿ ಶಿಕ್ಷಣ ಬರೀ ನೌಕರಿಗಾಗಿ ಅಷ್ಟೆ ಅಲ್ಲ ಜೀವನ ನಿರ್ವಹನೆಗಾಗಿಯೂ ಪಡೆಯಬೇಕಾಗಿದೆ, ಯಾವುದೇ ಕಾರ್ಯ ಶಿಕ್ಷಣದೊಂದಿಗೆಕೈಗೊಂಡಲ್ಲಿಅದುಯಶಸ್ಸು ನೀಡುತ್ತದೆ ಎಂದರು.
ಗ್ರಾ.ಪಂ. ಅಭಿವೃದ್ಧಿ ಅಧಿಕಾರಿ ಶಿವಾನಂದ ಬಿರಾದರ,ತಾ.ಪಂ. ನಿರ್ವಾಹಕ ಸದಾಶಿವ ಅರೆನಾಡ, ಸಿಆರ್‌ಪಿ ಸಮನ್ವಯ ಅಧಿಕಾರಿ ಶ್ರೀಮತಿ ದ್ರಾಕ್ಷಾಯಿಣಿ ಮಂಡಿ ಮಾತನಾಡಿದರು.
ಕಾರ್ಯಕ್ರಮ ಅಧ್ಯಕ್ಷತೆಯನ್ನು ಗ್ರಾ.ಪಂ ಅಧ್ಯಕ್ಷೆ ಶ್ರೀಮತಿ ಮಾಲಾ ಮೋಟಗಿ ವಹಿಸಿದ್ದರು. ಉಪಾಧ್ಯಕ್ಷೆ ಶ್ರೀಮತಿ ಪ್ರೇಮಾ ಗೋವಿಂದಗೋಳ, ನ್ಯಾಯವಾದಿ ಬಿ.ಎಲ್ ಲಾಳಕೆ,ಮಹಾದೇವಗಾಯಕವಾಡ,ಭಾಸ್ಕರ ಬಡಿಗೇರ, ಪರಪ್ಪಾ ಪಾಲಭಾವಿ, ಅಶೋಕ ಧಡೂತಿ, ಗ್ರಾ.ಪಂ. ಸದಸ್ಯ ಮಹಾಲಿಂಗ ಮಾಯಣ್ಣವರ, ಮನೋಜ ಹಟ್ಟಿ, ನಾಗಪ್ಪಾ ಆಲಕನೂರ,ಬಾಳೇಶಬ್ಯಾಕೋಡ,ಬಾಳಪ್ಪಾ ಗಡೆಪ್ಪನವರ, ಪ್ರಮುಖರಾದ ಅಶೋಕ ಮೋಟಗಿ, ಪ್ರಭು ಗೋವಿಂದಗೋಳ, ರವಿ ದೊಡವಾಡ, ಸರಕಾರಿ ಪ್ರೌಢಶಾಲೆಯ ಮುಖ್ಯೋಪಾದ್ಯಾಯೆ ಎಂ.ಎಸ್. ಜಿಟ್ಟಿ ಸೇರಿದಂತೆ ಅಂಗನವಾಡಿ ಆಶಾ ಕಾರ್ಯಕರ್ತೆಯರು ಉಪಸ್ಥಿತರಿದ್ದರು.

# ಪರಿಸರ ನಾಶದಿಂದ ಮನುಕುಲ ಸರ್ವನಾಶ: ಪ್ರೊ. ಸಿರಸಂಗಿ



**ತಿಕೋಟಾ :** 5 ಜೂನ 2024 ಪಟ್ಟಣದ ಬಿ.ಎಲ್.ಡಿ.ಇ ಸಂಸ್ಥೆಯ ನಾತನ ಕಲಾ ಮಹಾವಿದ್ಯಾಲಯದಲ್ಲಿ ಇಂದು 5–ಜೂನ –2024 ರಂದು ಬೆಳಿಗ್ಗೆ 10–30 ಗಂಟೆಗೆ ರೊಮ್ ನಂಬರ 4 ರಲ್ಲಿ ಆಯ್ ಕ್ಯೂ ಎಸಿ ಹಾಗೂ ಎನ್.ಎಸ್.ಎಸ್. ಸಯೋಗದಲ್ಲಿ ವಿಶ್ವ ಪರಿಸರ ದಿನಾಂಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಈ ಕಾರ್ಯಕ್ರಮಕ್ಕೆ ಪ್ರಾಚಾರ್ಯ ಪ್ರೊ ಆರ್.ಬಿ ಸಿರಸಂಗಿ ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮಕ್ಕೆ ಜಾಲನೆ ನೀಡಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಬಸವರಾಜ ಸಾಲವಾಡಗಿ ಪ್ರಾಸ್ತಾವಿಕ ನುಡಿಗಳನ್ನಾಡಿ ಉಸಿರಿಗಾಗಿ ಪರಿಸರವನ್ನು ರಕ್ಷಿಸೋಣ, ಕಾಡು ಬೆಳಸಿ, ನಾಡು ಉಳಿಸಿ. ಮನೆಗೊಂದು ಮರ, ಊರಿಗೊಂದು ವನ. ಕಾಡೆ ಹಸಿರು ನಾಡೇ ಉಸಿರ. ಕಾಡಿನ ರಕ್ಷಣೆ ನಮ್ಮೆಲ್ಲರ ಹೊಣೆ. ಮರ ಬೆಳಸಿ ಬರ ಅಳಿಸಿ,ತಾಪ ಇಳಿಸಿ. ನಾನುಡಿಗಳು ಮಾಯವಾಗಿವೆ.
ಪರಿಸರ ದಿನವನ್ನು ಕಾಟಾಚಾರಕ್ಕೆ ಮಾಡದೆ ನಮ್ಮ ಆರೋಗ್ಯದ ದೃಷ್ಟಿಯಿಂದ ಮುಂದಿನ ಜನಾಂಗದ ದೃಷ್ಟಿಯಿಂದ ಕಾಡು ಉಳಿಸಬೇಕಾಗಿದೆ ಎಂದು ಹೇಳಿದರು. ಡಾ ರವಿಚಂದ್ರ ವಾಲಿಕಾರ ಮಾತನಾಡಿ ಅರಣ್ಯ ನಾಶ ದೇಶ ವಿನಾಶ ಅರಣ್ಯ ಇಲ್ಲದೇ ಬೆಳೆ ಇಲ್ಲಾ ಹೀಗೆ ಹತ್ತು ಹಲವಾರು ಸಮಸ್ಯಗಳು ತಲೆದೊರುತ್ತವೆ. ಪರಿಸರ ಬಗ್ಗೆ ಜಾಗೃತಿ ಮತ್ತು ನಮ್ಮ ಪರಿಸರದ ರಕ್ಷಣೆಗೆ ಉತ್ತೇಜಿಸಲು ಈ ದಿನವನ್ನು ಆಚರಿಸಲಾಗುತ್ತಿದೆ ಎಂದರು. ಅಧ್ಯಕ್ಷೆಯನ್ನು ಕಾಲೇಜಿನ ಪ್ರಾಚಾರ್ಯ ಪ್ರೊ ಆರ್.ಬಿ ಸಿರಸಂಗಿ ವಹಿಸಿ ಮಾತನಾಡಿದ ಅವರು ಪರಿಸರ ನಾಶದಿಂದ ಮನುಕುಲಸರ್ವನಾಶವಾಗಹತ್ತಿದೆ.ಪರಿಸರಸಂರಕ್ಷಣೆ ನಮ್ಮೆಲ್ಲರ ಹೊಣೆಯಾಗಬೇಕು. ಅಂದಾಗ ಮಾತ್ರ ಮುಂದಿನ ಪೀಳಿಗೆಗೆ ಪರಿಸರವನ್ನು ಉಳಿಸಲು ಸಾದ್ಯೆ ಎಂದು ಹೇಳಿದರು.
ಶ್ರೀ ಗಣೇಶ ಕಾಂಬಳೆ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.ದೈಹೀಕ ನಿರ್ದೇಶಕರಾದ ಶಿವಮೂರ್ತಿ ಚಿಕ್ಕನರ್ತಿ ವಂದಿಸಿದರು. ಮಹಾವಿದ್ಯಾಲಯದ ಎಲ್ಲ ಬೋಧಕ ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಪರಿಸರ ರಕ್ಷಣೆ ನಮ್ಮೆಲ್ಲರ ಕರ್ತವ್ಯ



**ರಬಕವಿ–ಬನಹಟ್ಟಿ :** ಪರಿಸರ ದಿನಾಚರಣೆ ಕೇವಲ ಒಂದು ದಿನದ ಆಚರಣೆಯಾಗದೇ ಅದು ನಿತ್ಯದ ಕಾಯಕವಾಗಬೇಕು. ಗಿಡ ಮರಗಳನ್ನು ನೆಡುವುದರ ಜೊತೆಗೆ ಅವುಗಳ ರಕ್ಷಣೆಯಲ್ಲಿ ಕೂಡಾ ನಾವು ತೊಡಗಬೇಕು ಎಂದು ಬನಹಟ್ಟಿಯ ದಿವಾಣಿ ನ್ಯಾಯಾಧೀಶೆ ಸುಷ್ಮ ಟಿ. ಸಿ. ತಿಳಿಸಿದರು.
ಅವರು ಬುಧವಾರ ಬನಹಟ್ಟಿಯ ವೃಕ್ಷ ಉದ್ಯಾನವನದಲ್ಲಿ ಅರಣ್ಯ ಇಲಾಖೆ ಮತ್ತು ತಾಲೂಕು ಕಾನೂನು ಸೇವಾ ಸಮಿತಿ ಇವರು ವಿಶ್ವ ಪರಿಸರ ದಿನಾಚರಣೆ ನಿಮಿತ್ಯವಾಗಿ ಹಮ್ಮಿಕೊಂಡ ಸಸಿ ನೆಡುವ ಕಾರ್ಯಕ್ರಮದಲ್ಲಿ ಸಸಿ ನೆಡುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.
ಜೀವ ಸಂಕುಲ ಸಂರಕ್ಷಣೆಗಾಗಿ ಪ್ರತಿಯೊಬ್ಬರೂ ಸಸಿ ನೆಟ್ಟು ಅದರ ಪೋಷಣೆಗೆ ಮುಂದಾಗಬೇಕು. ಪರಿಸರ ಮನುಷ್ಯನ ಆಸೆಗಳನ್ನು ಪೂರೈಸುತ್ತದೆ. ಆದರೆ ದುರಾಸೆಯನ್ನಲ್ಲ. ಪ್ರಕೃತಿಯ ನಿಯಮದ ವಿರುದ್ದ ಹೋಗದೆ ಅದರೊಂದಿಗೆ ಹೋದಾಗ ಮಾತ್ರ ಅದು ಸಮತೋಲನ ಕಾಪಾಡುವುದು. ಮುಂದಿನ ಜನಾಂಗ ಉತ್ತಮ ಆರೋಗ್ಯ ಹೊಂದಬೇಕಾದಲ್ಲಿ ಪ್ರತಿಯೊಬ್ಬರು ಗಿಡ ನೆಟ್ಟು ಪೋಷಿಸುವ ಜವಾಬ್ದಾರಿ ನಿಮ್ಮದಾಗಿದೆ ಎಂದು ತಿಳಿಸಿದರು.
ಜಮಖಂಡಿ ವಲಯ ಅರಣ್ಯಾಧಿಕಾರಿ ಪವನ ಕುರಣಿಂಗ ಮಾತನಾಡಿ, ಆರ್ಥಿಕ ಅಭಿವೃದ್ಧಿ ಜೊತೆ ಪರಿಸರ ಸಂರಕ್ಷಣೆ ಅಗತ್ಯವಿದ್ದು, ಪ್ರತಿಯೊಬ್ಬರು ಅರಣ್ಯ ರಕ್ಷಣೆಯಲ್ಲಿ ತೊಡಗಬೇಕು ಎಂದರು.
ಈ ಸಂದರ್ಭದಲ್ಲಿ ಉಪವಲಯ ಅರಣ್ಯಾಧಿಕಾರಿ ಮಲ್ಲು ನಾವಿ, ಮಹೇಶ ಜಿ. ಗಸ್ತಿ, ಅರಣ್ಯ ಅಧಿಕಾರಿಗಳು, ಮಹಾಂತೇಶ ಚಂಡಕಿ, ಲಕ್ಷ್ಮಣ ಪಾಟೀಲ, ವಕೀಲರಾದ ಸುಜಾತಾ ನಿಡೋಣಿ, ವರ್ಧಮಾನ ಕೋರಿ, ಎಸ್. ಜಿ. ಸಲಬನ್ನವರ, ಜುಬೇರ ಖಲಿಫ, ಕಾರ್ತಿಕ ಭೂತಿ, ಮಹೇಶ ಕೆಂಧೂಳಿ, ಬಸವರಾಜ ಕುಂಬಾರ ಪಾಲ್ಗೊಂಡಿದ್ದರು.



**ಬಾಗಲಕೋಟೆ : ವಿದ್ಯಾ ಪ್ರಸಾರಕ ಮಂಡಳದ ಶಂಕ್ರಪ್ಪ ಸಕ್ರಿ ಪದವಿ ಪೂರ್ವ ಕಾಲೇಜ್ ( ಪ್ರೌಢ ಶಾಲಾ ವಿಭಾಗ) ಸೆಕ್ಟರ್ ನಂಬರ್ 49, ನವನಗರದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಆಚರಿಸಲಾಯಿತು. ಎಂ.ಎಸ್ ಶೆಟ್ಟವಾಜಿ, ವ್ಹಿ.ಎಸ್ ದೇಸಾಯಿ, ಜಿ.ಜಿ ಕುಲಕರ್ಣಿ, ವಿಜಯಕುಮಾರ್ ಕೆ , ಧೇನು ಲಮಾಣಿ, ಜೆ ಎಸ್ ವಾಲಿಕಾರ್, ಎಸ್ ಆರ್ ಕುಲಕರ್ಣಿ, ವ್ಹಿ ಆರ್ ಕೋಟಿ, ಆರ್ ಕೆ ದ್ಯಾವಳರ ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.**

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State